ಕೊರವಂಜಿ

A. ANANTHIAH

ಸಂಪುಟ ೧೨ ಡಿಸೆಂಬರ್ ೧೯೫೩ ೯ ಸಂಚಿಕೆ

ಕುಹಕಿಡಿಗಳು

ಕೆರೆ ಒಡೆದ ಮೇಲೆ, ಕಂಬಳಿ ಕಿತ್ತುಕೊಂಡರು. (ಹಳೆಯ ಗಾದೆ)

—ಕೆರೆ ಒಡೆದ ಮೇಲೆ ಕಮಿಟಿ ಏರ್ಪಡಿಸಿದರು. (ಹೊಸಗಾದೆ)

* * *

ಚಡ್ಡಿ ಜಗನ್, ಪಿಜಾಮ ಫಕ್ರೂನ್ ಇವರುಗಳ ದೆಹಲಿ ಸಡಗರದಲ್ಲಿ, ಅಯೂಬ್ ಖಾನ್ ಅಮೇರಿಕಾದ ಪ್ರಶಸ್ತಿ ಪಡೆದನಂತೆ.

* * *

ಅಯ್ಯೋ! ಕಾಂಗ್ರೇಸ್ ಸರ್ಕಾರ ಬಂದಮೇಲೆ ಕಾಲ ಕೆಟ್ಟುಹೋಯ್ತು!

—ಮೊದಲು ಛತ್ರಿ ಮರೆತು ಹೊರಗೆ ಹೋದರೆ ಮಳೆ ಬರುತ್ತಿತ್ತು. ಈಗ ಛತ್ರಿ ತೆಗೆದುಕೊಂಡು ಹೋದರೂ ಮಳೆ ನಿಲ್ಲೋದೇ ಇಲ್ಲ ಎಂದೊಬ್ಬ ಗೊಣಗುತ್ತಿದ್ದ.

* * *

ಸರ್ಕಾರಿ ಅಧಿಕಾರಿಯೊಬ್ಬ ವಿಮೆ ಮಾಡಲು ವೈದ್ಯ ಪರೀಕ್ಷೆಗೆ ಹೋದಾಗ ಅಂದನಂತೆ.

—ಅಂದ ಹಾಗೇ ಡಾಕ್ಟರೇ! ಇನ್ನೂ ಐದು ವರ್ಷ ಹೆಚ್ಚು ವಯಸ್ಸಾಗಿದ್ದರೂ ನನ್ನ ಬ್ಲಡ್ ಪ್ರೆಷರ್ರು ಸರಿಯಾಗಿದೆ ಎನ್ನಬಹುದೇ?" ಎಂದು.

* * *

ಅದಕ್ಕೇ ನೋಡಿ, ನಮ್ಮ ಸರ್ಕಾರಿ ಕೆಲಸಗಾರರಲ್ಲಿ ಹಲವರು ದಿಟವಾಗಲೂ ದ್ವಿಜರು ಎನ್ನುವುದು.

—ಹೆರಿಗೆಯಾದಾಗ ಹುಟ್ಟಿದ್ದೊಮ್ಮೆ. ಕೆಲಸಕ್ಕೆ ಸೇರಿದಾಗ ಹುಟ್ಟಿದ್ದೊಮ್ಮೆ.

* * *

ಟ್ರೊಮನ್ನರ ಪರ ವಾದಿಸೋಕ್ಕೆ ಬೇಕಾದರೆ ನಮ್ಮ ಘನ ಲಾಯರನ್ನು ಕಳಿಸುತ್ತೇವೆ ಎಂದು ವೈಶಿಸ್ಕಿ ಹೇಳಿದ್ದು ಖಂಡಿತ ಸುಳ್ಳಂತೆ.

* * *

ಈ ಸಾರಿ "ಖಿಡ್ಡಾ" ಕಾರ್ಯಕ್ರಮ ಏರ್ಪಡಿಸಲಾಗಿದೆ. (ಸುದ್ದಿ)

—ಯಾವ ಹಿರಿಯ ಜನನಾಯಕರು ಬರುತ್ತಾರೋ? ಇನ್ನೂ ಅರ್ಥ ವಾಗಲಿಲ್ಲವಲ್ಲಾ !!

* * *

ಬರ್ಮುಡಾ ಸಮ್ಮೇಳನಕ್ಕೆ ನಮ್ಮ ಪ್ರತಿನಿಧಿಯನ್ನು ಕರೆಸಬೇಕಾಗಿತ್ತು ಎಂದು ಘೋಷಿಸುವುದೇ ನನ್ನ ಅಭಿಮತ—ಆದುದರಿಂದ ನನಗೇ ನಿಮ್ಮ ವೋಟು ಕೊಡಿ ಎಂದು ಕಾರ್ಪೊರೇಷನ್ನಿನ ಚುನಾವಣಾ ಅಭ್ಯರ್ಥಿಗಳು ಭಾಷಣಮಾಡಿದರಂತೆ.

* * *

ಹೆಬ್ಬಿಗುಬ್ಬಾಲೆಯ ಗಾಂಧೀ ಸಂಘದವರು ಫಿನ್ಲೆ ಪಂಚೆಗಳ ಮೇಲೆ ಸುಂಕ ವನ್ನು ಹಾಕಬಾರದು ಎಂದು ಠರಾವು ಮಾಡಿದ್ದಾರಂತೆ.

—ಅವುಗಳ ರಫ್ತಿಗೆ ಸಹಾಯವಾಗಲಿ ಎಂದೇ ಇರಬೇಕು.

* * *

ಹಳೇ ವಿದ್ಯಾರ್ಥಿಗಳ ಸಂಘಗಳ ಗಲಾಟೆಯಲ್ಲಿ, ಪ್ರಕೃತ ವಿದ್ಯಾರ್ಥಿಗಳು ಸಂಘವನ್ನೇ ಏರ್ಪಡಿಸುವುದಿಲ್ಲವಂತೆ.

* * *

ಕಾರ್ಪೊರೇಷನ್ ಚುನಾವಣಾವೇಳೆಗೆ, ಕಾರ್ಪೊರೇಷನ್ ಅಧಿಕಾರಿಗಳು "ಕೊಕ್ಕಾಟ"ದ ಸಂದ್ಯವನ್ನು ಏರ್ಪಡಿಸುತ್ತಾರೆಂಬುದು ಖಚಿತವಲ್ಲವಂತೆ.

* * *

ಈ ಪ್ಲಾಸ್ಟಿಕ್ ಬಳೆಗಳು ಬಂದ ಮೇಲೆ—ಬರೋರು ಯಾರು ಅಂತ ತಿಳಿಯದೆ ತಿರುಗಿ ನೋಡುವುದೇ ತಪ್ಪುಹೋಗಿದೆ ಎಂದು ಕಾಲೇಜ್ ಪತ್ರಿಕೆಯಲ್ಲಿ ವರದಿ.

ಉರಿಗಾಳು

ಬದುಕುವ ದಾರಿ ತಿಳಿದಿರುವ 'ದೇಶನಾಯಕರು' ಏನು ಮಾಡುತ್ತಾರೆ?.... ಮಂತ್ರಿ ಪದವಿ ಬೇಡವೆನ್ನುತ್ತಾರೆ.

*　　*　　*

ಬಿ.ಎ., ಬಿ.ಎಸ್‌ಸಿ. ಡಿಗ್ರಿಗಳು ಸರ್ಕಾರಿ ನೌಕರಿಗಳಿಗೆ ಅಗತ್ಯವಿರಬಾರದು ಎಂಬ ಧೋರಣೆ ಫೆಯಿಲಾದವರಿಗೆಲ್ಲ ಆಶಾದಾಯಕವಾಗಿದೆ.

*　　*　　*

ಮಿಲ್ಟನ್ ಕವಿಗೆ ಇದ್ದ ದೊಡ್ಡ ಕೊರತೆ ಏನು?....ಅವನು ಕವಿಯಾಗಿದ್ದದ್ದು.

*　　*　　*

ಮೊನ್ನೆ ಮಂತ್ರಿಗಳೊಬ್ಬರು ಭಾಷಣ ಮಾಡುತ್ತಿರುವಾಗ, ಒಬ್ಬರು ಸಭಿಕರು ನಡುವೆ ಏನೋ ಕುತರ್ಕ ಮಾಡಿದರಂತೆ. ಆಗ, ಮಂತ್ರಿಗಳು, "ಈ ರಾಷ್ಟ್ರಕ್ಕೆ ನೀವೋ ನಾನೋ?" ಎಂದರಂತೆ. "ತಾವು", ಎಂಬ ಉತ್ತರ ಬರುತ್ತಲೂ, ಮಂತ್ರಿಗಳು, "ಮತ್ತೆ ಏಕೆ ನೀವು ಬೇಜವಾಬ್ದಾರಿ ಮಾತಾಡುತ್ತಿದೀರಿ" ಎಂದರಂತೆ.

*　　*　　*

"ನಿಮ್ಮ ವಿಷಯ ಬಹಳ ಕೇಳಿದೇನೆ" ಎಂದು ಒಬ್ಬರು ಮಂತ್ರಿಗಳೊಬ್ಬರಿಗೆ ಹೇಳಿದಾಗ, ಅವರು 'ಶುದ್ಧ ಸುಳ್ಳು' ಅದನ್ನೆಲ್ಲ ನಂಬಬೇಡಿ" ಎಂದರಂತೆ.

*　　*　　*

ಮಾರ್ಲೆಕಾವನ್ನು ನೋಡುವುದಕ್ಕೆ ಹೋಗಲೇ ಎಂದು ಚರ್ಚಿಲ್‌ರವರು ಐಸೆನ್ ಹಾವರನ್ನು ಬರ್‌ಮ್ಯುಡಾದಲ್ಲಿ ಕೇಳುವರಂತೆ........ನಾವಾಗಿದ್ದರೆ, ಮಾಲೆನ್‌ಕಾವನ್ನೇ ಕೇಳುತ್ತಿದ್ದೆವು.

*　　*　　*

ಬೆರಿಯೂವನ್ನು ರಷ್ಯಾದಲ್ಲಿ ವಿಚಾರಣೆಗೆ ಗುರಿಮಾಡಿದಾಗ. ....ಅದು ಶುದ್ಧ ಅನ್ಯಾಯ! ಟ್ರೂಮನ್ನರ ಮೇಲೆ ಅಮೆರಿಕಾದಲ್ಲಿ ಆರೋಪಣೆ ಮಾಡಿದಾಗ........ ಅದು ಶುದ್ಧ ದಡ್ಡತನ!

ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಂತೆ, ನೀವು ಶಿಸ್ತಿನಿಂದ ಗಂಭೀರವಾಗಿ ನಡೆದು ಕೊಳ್ಳಬೇಕು (ಡಾ|| ಲಕ್ಷ್ಮಣಸ್ವಾಮಿ ಮೊದಲಿಯಾರ್) ಅದು ಅಲ್ಲಿಗೆ ಹೋಗಿ ನೋಡಿ ಬಂದವರಿಗೆ ಮಾತ್ರ ಸಾಧ್ಯ.

* * *

ಕನ್ನಡದಲ್ಲಿ ಇಂಟರ್ ತರಗತಿಗಳಿಗೆ ಪಾಠ ಕಲಿಸಲು ಅನುಕೂಲಿಸುವಂತೆ ಪಠ್ಯಪುಸ್ತಕಗಳು ತಯಾರಾಗಬೇಕು........ಪಠ್ಯಪುಸ್ತಕಗಳನ್ನೇ ಉಪಯೋಗಿಸದ ವಿದ್ಯಾರ್ಥಿವೃಂದ ಇದನ್ನು ಅನುಮೋದಿಸುವುದಿಲ್ಲ.

* * *

ದಕ್ಷಿಣ ದೇಶದ ಹಿಂದೀ ಪ್ರಚಾರ ಮಾಡುವವರು ಅಲ್ಲಿಯ ಜನರ ಮನ ನೋಯಿಸದಂತೆ ವರ್ತಿಸಬೇಕು. (ಶ್ರೀ ಪ್ರಕಾಶ) ಅಂದರೆ, ಹಿಂದಿಯನ್ನು ತಮಿಳಲ್ಲೇ ಮಾತನಾಡಬೇಕು.

* * *

"ಅವರನ್ನು ನಂಬಬಾರದು. ಅವರು ಬೆನ್ನ ಹಿಂದೆ ನಿಂತು ಕಣ್ಣು ಚುಚ್ಚು ವರು. ಎದುರಿಗೆ ನಿಂತು ಬೆನ್ನು ತಟ್ಟುವರು". (ಭಾಷಣ....ರಾಜಕೀಯ)

* * *

ಒಬ್ಬರು ವೃದ್ಧರು ಇನ್ನೊಬ್ಬರಿಗೆ :—"ನನಗೆ ಇಬ್ಬರು ಗಂಡುಮಕ್ಕಳು.... ಒಬ್ಬ ರಾಜಕೀಯಕ್ಕೆ ನುಗ್ಗಿದಾನೆ; ಇನ್ನೊಬ್ಬನೂ ಅಷ್ಟೇ ಅಪ್ರಯೋಜಕ."

* * *

ವಿಶ್ವವಿದ್ಯಾಲಯಕ್ಕೆ ಹೆಚ್ಚು ವಿದ್ಯಾರ್ಥಿಗಳು ಬರದಂತೆ ಮಾಡಬೇಕಾದದ್ದು ನಮ್ಮ ಕರ್ತವ್ಯ. (ಭಾಷಣ) ಒಬ್ಬೊಬ್ಬರೂ ೮ ಮೈಲಿ ರಸ್ತೆ ಮಾಡಬೇಕೆಂದು ಒತ್ತಾಯಪಡಿಸಿದರಾಯಿತು.

* * *

ಸಂಘ ಯಾವುದಾಗಲೀ, ಸಮಿತಿ ಯಾವುದಾಗಲೀ,
ಭಂಗವಾಗದಂತೆ ಮೌನವ್ರತವ ಹಿಡಿವೆ ನಾಂ
ಬಿಂಕ ತಪ್ಪಿ 'ಅಯ್ಯೋ ಪಾಪ' "ಹೀಗೆ ಮಾಡಬಾರದಿತ್ತೆ"
ಎಂದೆನೆ, ದಾಖಲೇನೋ ಖಂಡಿತ, ಮಗುದೊಂದು ಸಮಿತಿಗೆ.

ಕೊರವಾವಲೋಕನ

ವಾರಪತ್ರಿಕೆಯ ವಾರಭವಿಷ್ಯದಲ್ಲಿ ಪೂರ್ಣ ಮಗ್ನನಾಗಿದ್ದೆ, ಶನಿವಾರ ಮುತ್ಸಂಜೆ ಹೊತ್ತಿನಲ್ಲಿ, ನಮ್ಮ ಕ್ಲಬ್ಬಿನಲ್ಲಿ.

ಯಾರೋ ಮೂರು ಬೆರಳುಗಳನ್ನು ನನ್ನ ಕತ್ತಿನ ಹಿಂದೆ ಚುಚ್ಚಿ ಕಚಗುಳಿ ಯಾಡಿದರು, ಬಿಕ್ಕಿ ನಕ್ಕು ಹಿಂತಿರುಗಿದರೆ ಕೊರವ. ಕಿವಿಯಿಂದ ಕಿವಿ ತನಕ ಬಾಯನ್ನು ಬಿಟ್ಟಿದ್ದಾನೆ.

"ಏನುಬಂತೋ ಬೇನೇ ನಿನಗೆ! ಕಚಗುಳಿ ಇಡೋ ಅಷ್ಟು ಖುಷಿ ಆಗುಕ್ಕೆ ಕಾರಣ" ಎಂದು ಕೇಳಿದೆ.

"ತ್ರಿಶೂಲಿ"ಗಳನ್ನು ಈ ಮಧ್ಯಾಹ್ನ ತಾನೆ ಓದಿ ಮುಗಿಸಿ ಬಂದೆ ಕಣೋ ಚುಚ್ಚಿ ಕಚಕುಳಿ ಇಟ್ಟು ನಗಿಸುವ ಕಲೆ ಕನ್ನಡದ ಮೂರು ಪ್ರಾಂತ್ಯಗಳಲ್ಲಿ ಇದ್ದೇ ಇದೆ ಎಂದು ಬಿಚ್ಚಿ ತೋರಿಸುವ ಪುಸ್ತಕ, ಆದರೆ ಒಂದೇ ನಿಯಮವುಂಟು ಆ ಪುಸ್ತಕ ಪೂರ್ಣ ಅನುಭವಿಸುಕ್ಕೆ" ಎಂದ ಕೊರವ.

"ಅಂತಹಾ ಕಠಿಣ ನಿಯಮವಾವುದೋ?" ಎಂದೆ.

"ಪುಸ್ತಕವನ್ನು ಕೊಂಡು ಓದಬೇಕು ಅಥವಾ ಕದ್ದು ಓದಬೇಕೇ ವಿನಹಾ ಖಂಡಿತ ಎರವಲು ಪಡೆದು ಓದಬಾರದು" ಎಂದು.

ತಲೆ ಕೆರೆದುಕೊಂಡು 'ಯಾಕೋ' ಎಂದೆ.

ಕೊಂಡವಸ್ತು ಕದ್ದವಸ್ತು ನಮ್ಮದೇ ಆಗಿಹೋಗುತ್ತದೆ, ದಕ್ಕಿಸಿಕೊಂಡರೆ. ಆದರೆ ಎರವಲು ತಂದರೆ ಎಂದಾದರೂ ಹಿಂತಿರುಗಿ ಕೊಡಬೇಕಾದ ಪ್ರಮೇಯ ಬರಲೇ ಬಹುದು, ಅಲ್ಲವೇ?" ಎಂದ.

"ಅಂತಹಾ ತ್ರಿಶೂಲಿಗಳು ವೈ ಶೂಲಿ, ಎದೆ ಶೂಲಿ ಮತ್ತು ತಲೆ ಶೂಲಿ. ಕೇವಲ ಇಪ್ಪತ್ತೇ ಆಣೆಗೆ ಮೂರು ಶೂಲಿಗಳನ್ನು ಸುಖದಿಂದ ಅನುಭವಿಸಬಹುದು" ಎಂದ ಕೊರವ.

ಅವನ ಮನೆಯಿಂದಲೇ ಆ ಪುಸ್ತಕ ಕದಿಯುವುದು ಎಂದು ನಿರ್ಧರಿಸಿದ್ದೇನೆ.

* * *

ಒಂದು ತೆಳ್ಳನೆ ಬನೀನು ಹಾಕಿಕೊಂಡು ಧನುರ್ಮಾಸದ ಬೆಳಗ್ಗೆ ವಾಕಿಂಗ್ ಹೋಗಬಲ್ಲೆ. ಒಂದು ತಿಳಿ ರೇಷ್ಮೆ ಜುಬ್ಬಾ ಹಾಕಿಕೊಂಡು ಕಾರ್ತೀಕ ಮಾಸದಲ್ಲಿ,

ರಾತ್ರಿ ಎಂಟು ಗಂಟೆಯಲ್ಲಿ ಬಹಿರಂಗ ಸಭೆಯಲ್ಲಿ ಭಾಷಣ ಮಾಡಬಲ್ಲೆ. ಆದರೆ ಅದೇನು ರೋಗವೋ ಕಾಣೆ ಮಧ್ಯಾಹ್ನ ಎರಡು ಗಂಟೆ ಹೊತ್ತಿನಲ್ಲಿ ಕೂಡ, ಮಧ್ಯ ಬೇಸಿಗೆಯಲ್ಲೂ ಕಾಲು ಮಾತ್ರ ತಣ್ಣಗಾಗುತ್ತದೆ ನನಗೆ. ಆದಕ್ಕೇ ಎರಡು ಜತೆ ಉಣ್ಣೆ ಕಾಲುಚೀಲ ಹಾಕಿಕೊಂಡು, ಪೂರ್ಣ ಬೂಡ್ಸನ್ನೇ ನಾನು ಯಾವಾಗಲೂ ಧರಿಸೋದು ಹಗಲು ರಾತ್ರಿ ಎನ್ನದೆ, ಛಳಿಗಾಲ ಬಿಸಿಲುಗಾಲ ಎನ್ನದೆ.

ಶುಕ್ರವಾರ ಸಂಜೆ ಕ್ಲಬ್ಬಿನಲ್ಲಿ ಬೂಡ್ಸನ್ನೇ ಬೂಡ್ಸಿಗೆ ತಿಕ್ಕುತ್ತಿದೆ ಇನ್ನೂ ಸ್ವಲ್ಪ ಹಿತವಾಗಿ ಬಿಸಿ ಇರಲಿ ಎಂದು. ಆಗ ಕೊರವ ಚಪ್ಪಲಿ ಮೆಟ್ಟಿಕೊಂಡು, ಸಿಲ್ಕ್ ಜುಬ್ಬಾ ಧರಿಸಿ ಎದುರಿಗೆ ಬಂದು ನಿಂತ.

"ಛಳಿಯಾಗುಲ್ಲವೇನೋ ನಿನ್ನ ಅಂಗಾಲಿಗೆ" ಎಂದು ಆಶ್ಚರ್ಯಿಸಿದೆ.

"ಇವತ್ತು ಹವಾ ಏನೂ ನನ್ನ ಕಾಲು ಬೆರಳನ್ನು ತಟ್ಟುಲ್ಲ. ಗಾಂಧಿನಗರದಲ್ಲಿ ಜವಹರ ಬೀದೀಲಿ, ಮೂರಂತಸ್ತಿನ ಮನೆ ಇದೆ ನೋಡು, ಅವರ ಮಾಲೀಕ ಮಾರ್ವಾಡಿ ಹರೋಹರ ಅಂದ ನೋಡು, ಆ ಮನೆ ಈ ದಿನ ನಾನು ಕೊಂಡು ಕೊಂಡೆ, ಇಪ್ಪತ್ತು ಸಾವಿರಕ್ಕೆ" ಎಂದ ಕೊರವ.

"ನೀನು ಹೇಳೋ ಕಡೆ ಕಾರಿನ ಛಾಯಕ್ಕೇ ಇಪ್ಪತ್ತು ಸಾವಿರ ಕೇಳ್ತಾ ರಲ್ಲೋ? ಆ ದೊಡ್ಡ ಮನೆಗೆ ಇಪ್ಪತ್ತು ಸಾವಿರ ಅಂದ್ರೆ ಏನೋ ಅಚಾತುರ್ಯ ಇರ ಬೇಕಲ್ಲವೇ" ಎಂದೆ, ನನಗೆ ಸಿಗಲಿಲ್ಲವಲ್ಲಾ ಎಂದು ಕೈ ಕೈ ಹಿಸುಕುತ್ತಾ.

"ಮನೆಯ ಮಾಲೀಕ ಹೋಗುವಾಗ ಚರಮಶಾಸನ ಬರೆದಿದ್ದನಂತೆ. ಮನೆ ಯನ್ನು ಮಾರಿ, ಬಂದ ಹಣದಲ್ಲಿ ಮರಣ ತೆರಿಗೆ ಕೊಟ್ಟು, ಮಿಕ್ಕಿದ್ದನ್ನು ತನ್ನ ಮೂರನೇ ಮಕ್ಕಳಿಲ್ಲದ ಹೆಂಡತೀಗೆ ಕೊಡಬೇಕು ಎಂದು. ಮೊದಲನೆ ಹೆಂಡತಿ ಮಗ, ಮಾರ್ವಾಡಿಯ ಒಬ್ಬನೇ ಮಗ. ಅದನ್ನು ಇಪ್ಪತ್ತು ಸಾವಿರಕ್ಕೆ ಮಾರಿ, ಹದಿನೆಂಟು ಸಾವಿರ ಮರಣ ತೆರಿಗೆ ಕೊಟ್ಟು, ಮಿಕ್ಕ ಎರಡು ಸಾವಿರಾನಾ ತನ್ನ ಎರಡನೇ ಮಲತಾಯಿಗೆ ಕೊಟ್ಟು ಜೋಧಪುರಕ್ಕೆ ಕಳಿಸಿದ. ಆ ಗೃಹಕೃತ್ಯದಲ್ಲಿ ನಾನು ಗೃಹ ಸಂಪಾಸಿದಿದೆ. ಇನ್ನು ಛಳಿಯೇನು ಗಾಳಿಯೇನು" ಎಂದು ಕೊರವ ವಿಶದೀಕರಿಸಿದ.

ಅವನ ಲೆಕ್ಕದಲ್ಲಿ ಎರಡು ಪ್ಲೇಟು ಓಂಪುಡಿ ತಿಂದಿದ್ದೆ, ಅವನ ಅದೃಷ್ಟದಲ್ಲಿ ನಾನು ಭಾಗವಹಿಸಿದ್ದು—ಅಷ್ಟೇ. ಇಹಲೋಕದಲ್ಲಿ ನಾನು ಕೇಳಿಕೊಂಡು ಬಂದಿದ್ದು.

——— o ———

ಗ್ರಾಮ ಪುನರುಜ್ಜೀವನ

ಹೇಗಿದ್ದರೂ, ಅದೇ ದಾರಿಯಲ್ಲಿ ಹೋಗ್ತಿದೇನೆ, ಹಳೆಯ ಹಳ್ಳಿಗೆ ಭೇಟಿ ಕೊಟ್ಟು ಬರೋಣ ಎಂದು ಶಂಭು ಯೋಚಿಸಿದ.

ಶೆಟ್ಟರ ಅಂಗಡಿಯಲ್ಲಿ ಸಿಗರೇಟು ಕೊಂಡುಕೊಂಡ. ಶೆಟ್ಟರೊಂದಿಗೆ ಒಂದು ಗಳಿಗೆ ಮಾತಾಡುತ್ತ ಕುಳಿತಿದ್ದ. ತನ್ನ ಸಮಕಾಲೀನರು ಯಾರೂ ಹಳ್ಳಿಯಲ್ಲಿಲ್ಲ, ಪಟೇಲರ ಮಗ ಭದ್ರಾವತಿಯಲ್ಲಿ ಗುಮಾಸ್ತೆ, ಶ್ಯಾನುಭೋಗರ ಮಗ ಏರ್‌ಕ್ರಾಫ್ಟ್‌ನಲ್ಲಿ ಮೆಕ್ಯಾನಿಕ್, ಮೇಷ್ಟರ ಮಗ, ಬಸ್‌ಕಂಡಕ್ಟರು, ಕುಂಬಾರನ ಮಗ ಫಾರೆಸ್ಟ್ ಗಾರ್ಡ್, ಎಂದೆಲ್ಲ ಶೆಟ್ಟರು ಹೇಳಿದರು. ಹಳ್ಳಿಯಲ್ಲಿ ಈಗ ಇರುವವರೆಲ್ಲರೂ, ಹೆಚ್ಚಾಗಿ ಹಣ್ಣು ಹಣ್ಣು ಮುದುಕರು, ಖಾಯಿಲೆಯವರು, ದೇವಸ್ಥಾನದ ಅರ್ಚಕರು, ಅಷ್ಟೆ. ಮಿಡ್ಲಿಸ್ಕೂಲ್ ಮುಗಿಸಿದ ತಕ್ಷಣ, ಹಾಸ್ಟಲ್ ಸೇರಿ ಹೈಸ್ಕೂಲ್ ಓದಿ, ಊರು ಬಿಟ್ಟು, ಎಲ್ಲೆಲ್ಲೋ ನೌಕರಿ ಸೇರುತ್ತಿದ್ದಾರೆ. ಇರುವ ಹತ್ತು ಹನ್ನೆರಡು ಹುಡುಗರೂ ಕೂಡ, ಪ್ರತಿ ದಿನ ಸೈಕಲ್ ಬಾಡಿಗೆ ತೆಗೆದುಕೊಂಡು, ಹತ್ತು ಮೈಲಿ ಹೋಗಿ ಸಿನಿಮ ನೋಡಿ ಬರುತ್ತಾರೆ. ಬೆಂಗಳೂರು ಕುದುರೆ ಜೂಜು ಸೀಸನ್ ಪ್ರಾರಂಭವಾದಮೇಲಂತೂ, ಒಬ್ಬರೂ ಊರಲ್ಲಿರುವುದಿಲ್ಲ, ಎಂದರು.

ನೀವೇಕೆ ಇನ್ನೂ ಇಲ್ಲೇ ಇದೀರಿ, ಅಂದರೆ, ಜಮೀನ್ ವಿಷಯದ ಕೇಸು ೧೦ ವರ್ಷದಿಂದ ನಡೆಯುತ್ತಾ ಇದೆ. ಅದು ಇತ್ಯರ್ಥವಾಗಿ, ನನ್ನ ಹಕ್ಕು ಸಿದ್ಧವಾದರೆ, ಅದನ್ನ ಮಾರಿ, ನಾನೂ ಬೆಂಗಳೂರಿಗೆ ಹೋಗುತ್ತೇನೆ. ನಮ್ಮ ಹುಡುಗ ಒಬ್ಬ ಈ ವರ್ಷ ಇಂಟಮೀಡಿಯಟ್‌ಗೆ ೩ನೆ ಸಾರಿ ಕಟ್ಟಿದಾನೆ, ಅಂದರು.

ತಮ್ಮ ಅಳಿಯಂದಿರೊಂದಿಗೆ, ಮಗನೊಂದಿಗೆ, ಸಂಸಾರ ಹೂಡಿ ಸುಖವಾಗಿರಬಹುದಲ್ಲಾ, ಆಸ್ಪತ್ರೆ ಸ್ಕೂಲು ಕಾಲೇಜು ಸಿನಿಮಾ ನಾಟಕ ನೃತ್ಯ ಷಾಪು ಇವೆಲ್ಲ ಇರುವ ಪಟ್ಟಣಗಳೇ ಮೇಲು, ಈ ಹಾಳು ಊರಿಗಿಂತ, ಎಂದು, ಶಂಭು ಚಿಕ್ಕವನಾಗಿದ್ದಾಗಿನ ಹಿರಿಯರೆಲ್ಲರೂ, ಹಳ್ಳಿಯ ತೊರೆದಾಯಿತು, ಎಂದು ಶೆಟ್ಟರು ಹೇಳಿದರು.

ಅಂಗಡಿಯಿಂದ ಶಂಭು, ರಾಮಮಂದಿರಕ್ಕೆ ಹೋದ. ಅಲ್ಲಿ, ಒಳಗೆ ಎಂಟು ಹತ್ತು ಜನ ಸೂಟು ಹ್ಯಾಟು ಸಹಿತ ಕೂತು, ಇಸ್ಪೀಟು ಆಡುತ್ತಿದ್ದರು, ಯಾರೂ, ಎತ್ತ, ಎಂದು ವಿಚಾರಿಸಿದ. ಒಬ್ಬರು "ಹೆಚ್ಚು ಆಹಾರ ಬೆಳೆಯಿರಿ" ಇನ್‌ಸ್ಪೆಕ್ಟರ್ ಒಬ್ಬರು, "ಕೋಳಿ ನಿಪುಣ"; ಒಬ್ಬರು, "ಗೊಬ್ಬರ ವಿಜ್ಞಾನದ ಸಲಹೆಗಾರ"; ಒಬ್ಬರು ನೆಯ್ಗೆ ಆಫಿಸರ್; ಒಬ್ಬರು ಹೊಸ ವಿಧಾನದ ಕುಂಬಾರ ಕೆಲಸದ ಪದವೀಧರರು.

"ನಾನು ಇದೇ ಊರಿನವನಾಗಿದ್ದೆ" ಎಂದು ಶಂಭು ಹೇಳಿದಾಗ, ಅವರು, "ಒಳ್ಳೇ ಕೆಲಸ ಮಾಡಿದಿರಿ! ಹಳ್ಳಿಯಲ್ಲಿ ನಮ್ಮ ಬಾಳು ನಾಯಿ ಪಾಡು!" ಎಂದು ಗೊಣಗಿದರು.

"ನೀವು ಈಗ ಏನು ಕೆಲಸ ಮಾಡುತ್ತಿದೀರಿ?" ಎಂದರು. "ನಾನು ಅಮೇರಿಕದ ಮಿಕ್ರೊ ಫಾರ್ಮಸೂಟಿಕಲ್ಸ್ ಏಜಂಟು" ನಿಮ್ಮ ತಂದೆ ಏನಾಗಿದ್ದರು? "ಇದೇ ಊರಲ್ಲಿ ಆಯುರ್ವೇದ ಪಂಡಿತರಾಗಿದ್ದರು"

———o———



ಸ್ವಾತಂತ್ರ್ಯ ಬಂದ ಮೇಲೆ ನಮ್ಮೂರ ಗಡಿಯಾರ!

ನಮ್ ಕ್ಲಬ್ಬಿನಲ್ಲಿ

ಮೋಡ ಮುಚ್ಚಿದ ಮೇಲ್ಹೊದ್ದಿಕೆ, ತುಂತುರುಮಳೆ. ಒಂದು ಗೇಮ್ ಸಹ ಬ್ಯಾಡ್ಮಿಂಟನ್ ಆಡಕ್ಕಾಗಲಿಲ್ಲವಾದ್ದರಿಂದ, ಗೆಳತೀರೆಲ್ಲ ಹಾಲ್‌ನಲ್ಲಿ ಗುಂಪಾಗಿ ಗಲಗಲಿಸುತ್ತಿದ್ದರು. 'ಅಕ್ಷರ ಕೋಟಿ' ಕಟ್ಟೋಣ ಅಂತ ಒಬ್ಬರು 'ಕೊಕ್' ಕುಕ್ಕೋಣ ಅಂತ ಇನ್ನೊಬ್ಬರು, 'ಟೋಪಿ' ಹಾಕೋಣ ಅಂತ ಮತ್ತೊಬ್ಬರು, 'ಕತ್ತೆ' ಆಡೋಣಾಂತ ಮಗದೊಬ್ಬರು, ಕೊನೆಗೆ 'ಕತ್ತೆ'ಯೇ ಗೆದ್ದಿತು.

ಎಲ್ಲಾ ಸುತ್ತುಗಟ್ಟಿದೆವು. ನಾಲ್ಕೈದು ರೌಂಡು ಆಟ ಸಾಗಿತು. ಇನ್ನೇನು ಇನ್ನೇನು ಕಮಲಾಬಾಯಿ 'ಕತ್ತೆ' ಆಗಿ ಕಿವಿ ಹಿಡಿದು ಕೆನೆಯೋ ಪ್ರಮೇಯ ಬಂದಿತು, ಅಷ್ಟರಲ್ಲಿ ಅಲಮೇಲಮಂಗಮ್ನೋರ ಮನೆಯಿಂದ ಹ್ಯಾಂಡ್‌ಮೇಡ್ ಮುರುಕ್ಕು ಟ್ರೇತುಂಬ ಮಧ್ಯ ಬಂದು ಕೂತಿತು!

ಹ್ಯಾಂಡ್ ಮೇಡ್ ಅಂತೀಯಲ್ಲ ಮೆಷೀನ್ ಮೇಡ್ ಮುರುಕೂ ಉಂಟೇ ಬೆಪ್ಪೂ ಅಂತೀರಾ?—ಉಪಾಧ್ಯಾಯರೊಬ್ಬರು ಪಾಠ ಹೇಳುತ್ತಾ 'ಹೆಣ್ಣು ಹುಡುಗಿ ಪಾಪ ಏನು ಮಾಡಿಯಾಳು' ಅಂದರಂತೆ. ತುಂಟಹುಡುಗನೊಬ್ಬ ಎದ್ದು ನಿಂತು "ಹುಡುಗೀರಲ್ಲಿ ಹೆಣ್ಣು ಹುಡುಗಿ ಬೇರೆ ಗಂಡು ಹುಡುಗಿ ಬೇರೆ ಉಂಟೇನ್ಸಾರ್!" ಎಂದನಂತೆ ನಗುತ್ತ. ಉಪಾಧ್ಯಾಯರು ಅರೆಘಳಿಗೆ ಕಣ್ಣುಮುಚ್ಚಿ ಯೋಚಿಸಿದರಂತೆ. 'ಮೊನ್ನೆ ಕಾಲೇಜ್ ಡೇ ದಿನ ನೀನು ನಾಟಕದಲ್ಲಿ ಏನು ವೇಷ ಹಾಕಿದ್ದೋ? ಆಗ ನೀನು ಗಂಡು ಹುಡುಗೀ ಆಗಿದ್ದೆ! ಎಂದುತ್ತರಾ ಕೊಟ್ಟು ಬಚಾವಾದರಂತೆ!— ಹಾಗೇ ಹ್ಯಾಂಡ್‌ಮೇಡ್ ಮುರುಕ್ಕೆಂದರೆ ತಮಿಳರ ಸ್ಪೆಷಲು. ಕೈಯಲ್ಲೇ ಚಕ್ಕುಲಿ ಸುತ್ತುತ್ತಾರೆ, ವರಳಲ್ಲಲ್ಲ!

ತಿಂಡಿ ತಟ್ಟೆ ಬರುತ್ತಲೇ ಆಟ ತಟಸ್ಥವಾಯಿತು. ಕಮಲಾಬಾಯಿ ಬದುಕಿಕೊಂಡರು. ಕೈಬಾಯಿಗೆ ಕೆಲಸ ನಿರಂತರವಾಗಿ ನಡೆಯತೊಡಗಿತು. ಮಧ್ಯೆ ಮಧ್ಯೆ 'ಎಷ್ಟು ಚೆನ್ನಾಗಿ ಸುತ್ತಿದೀರ್ರಿ?'....'ಹಿಟ್ಟು ಹೇಗ್ರೀ, ಒಂದ್ಕಕ್ಕೆ ನಾಲ್ಕೋ ಐದೋ (ಗಂಡಸರಿಗೆಲ್ಲ ಈ ಪ್ರಶ್ನೆ ಒಗಟೆ ಅಲ್ಲವೇ?) ?....ಏನು ಘಂ ಅಂತ ಮಾಡಿದೀರ್ರಿ? ಎಸೆನ್ಸ್ ಏನಾದ್ರೂ ಹಾಕಿದ್ದಾರೇನ್ರೀ?...., ಇತ್ಯಾದಿ ಪ್ರಶ್ನೆಗಳು ಬೇರೆ.

"ಎಸೆನ್ಸ್ ಅಂತಾಲೇ ನೆನಪಿಗೆ ಬಂತು. ನಮ್ಮನೇದೊಂದು ತಮಾಷೆ ಹೇಳ್ಬೇಕ್ರೀ ನಿಮಗೆಲ್ಲ!" ಅಂದರು ಸೀತಾರಾಮ್‌ರವರು. (ಇದೇನು ಮಿಕ್ಸೆಡ್ ಕ್ಲಬ್ಬೇ ನಿಮ್ಮದು ಅಂತ ಮೂಗಿನ ಮೇಲೆ ಬೆರಳಿಡಬೇಡಿ, 'ಸೀತಾ' ಅವರಪ್ಪ ಅಮ್ಮ ತೊಟ್ಟಿಲಿಟ್ಟಾಗ ಆಕೆಗೆ ಕಟ್ಟಿದ ಹೆಸರು, 'ರಾಮ' ಕೈಹಿಡಿದಾತನ ನಾಮಧೇಯ!) ಎಲ್ಲರೂ ಚಕ್ಕುಲಿ ಭರಿತ ಬಾಯಿಮುಚ್ಚಿ ಕಿವಿಬಿಚ್ಚಿ ಕೂತೆವು.

"ನೋಡೀ, ನಮ್ಮಜ್ಜೀಂದ್ರೆ ಒಂದು ವೇದಾಂತಮುದ್ದೆ. 'ಒಳ್ಳೇದೊಂದು ರೇಷ್ಮೆ ಸೀರೆ ಉಟ್ಕೋ' ಅಂದ್ರೆ 'ನನಗ್ಯಾಕಮ್ಮ ತಾಯೀ' ಅಂತಾ. 'ಅಷ್ಟೊಂದು ಒಡವೇ ಇದೆಯಲ್ಲ, ಎಲ್ಲಾರೂ ಹಾಕ್ಕೊಳ್ಳಲ್ವೇ, ನೀನೂ ವಾಲೆ, ಒಳೆ, ಹಾಕ್ಕೊಳ್ಳಜ್ಜಿ' ಅಂದ್ರೆ 'ನನಗಿನ್ಯಾಕಮ್ಮ ಅವರೇ ಹೋದ್ಮೇಲೆ' ಅಂತ ಕಣ್ಣೀರು ಹಾಕ್ಬಿಡ್ತಾರೆ. ಎಲ್ಲಾ ಕಬ್ಬಿಣದ್ಪೆಟ್ಟಿಗೇಲಿ ತುಂಬಿಟ್ಟಿದಾರೆ ಪ್ರಾಣಿ! ಬೆಳಗಾದರೆ ಮಡಿ, ಪೂಜೆ, ದೇವರು; ಸಂಜೆಯಾದರೆ ದೇವಸ್ಥಾನ, ಪುರಾಣ, ಹರಿಕಥೆ, ರಾತ್ರಿಯಾದರೆ ಒಂದು ಚಾಪೆ, ಒಂದು ದಿಂಬು, ಒಂದು ಶಾಲು; ಇಷ್ಟರಲ್ಲೇ ಆಕೆ ಜನ್ಮ ಕಳೀತಿದೆ ನನಗೆ ಬುದ್ಧಿ ಬಂದಾಗಿನಿಂದ.

ನಿನ್ನೆ ಏನಾಯ್ತೂಂತೀರಿ. ಅಜ್ಜೀ ಗೂಡು ಬಾಗಿಲು ಅಕಸ್ಮಾತ್ತಾಗಿ ತೆಗೆದೆ. 'ಘಂ' ಅಂತ ವಾಸನೆ! ಇದೇನಾಶ್ಚರ್ಯ ಅಂತ ನೋಡಿದರೆ 'ಕೇಶವರ್ಧಿನೀ' ತೈಲ ಹೊಸ ಶೀಶೆ! ಪಕ್ಕದಲ್ಲಿ ಅಕ್ಕ ತಂಗಿಯರಂತಿರುವ ಇನ್ನೂ ಹೊಸ ಶೀಶೆಗಳು, ಡಬ್ಬಿಗಳು, ಭರಣಿಗಳು, ಮುಖವೆಲ್ಲ ಕಣ್ಣಾಗಿ ಲೇಬಲ್ಲುಗಳ್ನ ಓದಿದೆ. ರಕ್ತಪೋಷಿಣೀ ಲೇಹ್ಯ, ಎಲಿಗ್ಸಿರ್ ಲಿವರ್, ಮಹಾಚ್ಯವನಪ್ರಾಶ, ವೈಟೋಮಾಲ್ಟ್, ಇತ್ಯಾದಿ; ಇದಲ್ಲದೆ ಒಂದು ಬಾಟಲ್ ಕೊಡಗಿನ ಜೇನುತುಪ್ಪ, ಒಂದು ಡಬ್ಬಿ ಒಡೆದ ಬಾದಾಮಿ, ದ್ರಾಕ್ಷಿ, ಖರ್ಜೂರ....!

'ಎಲ್ಹೋದೆಯೋ ರಾಮೂ?' ಗುಡುಗಿತು ಅಜ್ಜೀ ಧ್ವನಿ. ಅಜ್ಜಿ ಹಾಗೆ ಅಬ್ಬರಿಸಿದುದು ನಾನು ಜನ್ಮೇಪಿ ನೋಡಿರಲಿಲ್ಲ! ಬೆದರಿ ಬಾಗಿಲ ಹಿಂದೇ ನಿಂತುಬಿಟ್ಟೆ. 'ರಾಮೂ, ಈಗಲೇ ಹೋಗಿ ಅಂಗಡೀಲಿ ನನಗೆರಡು ಕ್ವಿಲ್ಟು, ನಾಲ್ಕು ಬೆಡ್‌ಷೀಟು, ಒಂದು ರಗ್ಗು, ಸೊಳ್ಳೇಪರದೇ ತಂದುಬಿಡು. ಆ ದೊಡ್ಡ ಮಂಚಾ ತಂದು ಈ ರೂಮ್‌ನಲ್ಲೇ ಜೋಡಿಸ್ಬಿಡು' ಎನ್ನುತ್ತಾ ರೇಷ್ಮೆ ಸೀರೆ ಉಟ್ಟ ಅಜ್ಜಿ ನೋಟಿನ ಕಂತೆ ತುರುಕಿದರು ರಾಮೂಕೈಗೆ. "ರಾಮೂ, ಅಂದ್ಹಾಗೇ ಹಾಗೇ ಒಳ್ಳೇದ್ಯಾವುದಾದರೂ ತೆಲುಗೂ ಪಿಕ್ಚರ್‌ಗೆ ಸಾಯಂಕಾಲಕ್ಕೆ ಸೀಟ್ ರಿಸರ್ವ್ ಮಾಡಿಸಿ ಬಂದುಬಿಡು .. ಟ್ಯಾಕ್ಸೀ ತರ್ಬೇಕು ಹೋಗೋದಿಕ್ಕೆ ಮರೀಬೇಡ!"

ರಾಮೂನ ಕಳಿಸ್ತಾಲೇ ನನ್ನ ಕೂಗಿದರು. "ಸೀತಾ, ಯಾವಾಗಲೂ ಕಡ್ಡಿ ಸೂಜಿ ಹಿಡಿದಿರ್ತೀಯಲ್ಲ, ನನಗೊಂದು ಭೆಚ್ಚನೇ ಸ್ವೆಟರ್ ಹಾಕ್ಕೊಡು ಡಿಸೆಂಬರ್


ಹುಟ್ಟೋದ್ರೊಳಗೆ!....ಹಾಗೇನೇ ಇನ್ನೊಂದು ಮರಿತೆ. ನಿವ್ ಕ್ಲಬ್ಬಿನ ಫೀಜು ಗೀಜು ಎಷ್ಟು ಸರಿಯಾಗಿ ಕೇಳಿ ನನಗೊಂದು ಫಾರಂ ತೆಗೆದ್ಕೊಂಡು ಬಾ ಸಾಯಂ ಕಾಲ" ಅಂತ ಹೇಳಿಕಳಿಸಿದ್ದಾರೆ!

"ಏನ್ರೀ ಸೀತಾರಾಮ್? ಇದ್ದೇನಾಶ್ಚರ್ಯ? ನಿಮ್ಮಜ್ಜಿ ಹೀಗೆ ಪರಿವರ್ತನೆ ಆಗೋದಕ್ಕೆ?" ಅಂದೆವು ಒಟ್ಟಿಗೆ.

"ಅದೇ ಹೇಳ್ತೀನಿ ತಡೀರಿ. ಕೇಳೇಬಿಟ್ಟೆ ಅಜ್ಜೀನ ಇವತ್ತು ಬೆಳಗ್ಗೆ. 'ಅಯ್ಯೋ ಮಂಕೆ ಅಷ್ಟು ತಿಳಿಯಲ್ವೇನೇ? ಈ ಹಾಳು ಸಾವಿನ ತೆರಿಗೇ ಹಾಕಿದ್ದಾರೆ. ನಮ್ಮಮ್ಮನ ಕಡೆಯಿಂದ ನನಗೆ ಬಂದಿರೋ ಒಡವೇ ನಗದೂ ಎಂಭತ್ತು ಸಾವಿರದ ಮೇಲಿದೆ ನನ್ಹೆಸರಿನಲ್ಲಿ!' ಅಂದಳು ಅಜ್ಜಿ. 'ಅಲ್ಲಜ್ಜೀ, ಹಾಗಾದ್ರೇ....ನೀನು.... ಸಾಯ್ದೇನೇ....?' 'ನಾನೇನು ಸಾಯ್ದನೇ ಇರ್‍ತೀನಿ ಅಂದ್ನೇ? ಇನ್ನೂ ಇಪ್ಪತ್ವರ್ಷ ಬದುಕಿರ್‍ತೀನಿ. ಅಷ್ಟೊತ್ತಿಗೆ ಇನ್ಯಾವ ಶಿಖಾಮಣಿ ಶೇಷಮುಖನೋ ದಶಮುಖನೋ ಬರ್‍ತಾನೋ, ಈ ತೆರಿಗೆ ತೆಗೆದ್ಹಾಕ್ತಾನೋ ನೋಡೋಣ" ಅಂದರು ಅಜ್ಜಿ!

'ಸೀತಾರಾಮು' ಅಜ್ಜಿಯ ಆಶಾವಾದಿತ್ವಕ್ಕೆ ಬೆರಗಿ ನಗುತ್ತಾ, (ಚಕ್ಕುಲಿ ತಟ್ಟೆ ಬರಿದೂ ಆದ್ದರಿಂದ) ಎಲ್ಲರೂ ಮನೇಕಡೆ ಮುಖ ಮಾಡಿದೆವು.

—ಸುನಂದಮ್ಮ.



ಕಾರ್ಪೊರೇಷನ್ ಚುನಾವಣೆಗೆ ಈಗಿನಿಂದಲೇ ರಿಹರ್ಸಲ್ ಮಾಡ್ತಿದಾರಲ್ಲಾ !!

ಆತ್ಮಹತ್ಯೆ

ಕೊರಗುತಿಹೆ ನಯ್ಯೊ!
ಕರಗುತಿಹೆ ನಯ್ಯೊ!
ಹಾಯ್,
ಕ್ಷಣಕ್ಷಣಕು ಕರಗುತಿಹೆ
ಕೊರಗುತಿಹೆ ನಯ್ಯೊ!

ಗಾಜಿನ ಮನೆಯಲ್ಲಿ
ಬಣ್ಣ ಬಣ್ಣಗಳಿಂದ
ಮಿರು ಮಿರುಗುತಿದ್ದೆನ್ನ
ವಿಭವವೆಲ್ಲಿ
ಯಾರದೋ ಚಪಲಕ್ಕೆ
ಬಲಿಯಾಗಿ ಈ ಗುಹೆಯ
ಸೇರಿ ಕರಗುತ್ತಿರುವ
ಈ ಪಾಡದೆಲ್ಲಿ!

ತಾಳಲಾರೆನು ಅಯ್ಯೊ
ಈ ಹಲ್ಲು ಮಸೆದಾಟ–
ತಾಳಲಾರೆನು ಅಯ್ಯೊ
ನಾಲಿಗೆಯ ಸುಲಿದಾಟ–
ಚಿತ್ರ ಹಿಂಸೆಗೆ ಸಿಲುಕಿ
ಇಂತು ಸಾವುದಕಿಂತ
ಕೆರೆ ಭಾವಿಯೇ ಲೇಸು
ಆತ್ಮ ಹತ್ಯೆಯೆ ಲೇಸು

—ಎಂದೆನುತ
ಪೂರ್ಜಿ ಕರಗುವ ಮುನ್ನ
ಗಂಟ ಲೊಳಿದು
ಪಾತಾಳ ಕೈದಿತು
ನನ್ನ ಬಾಯೊಳಿದ್ದೊಂದೆ
ಪೆಪ್ಪರ ಮಿಂಟು.

—ಸರೋಜಿನಿ.

ಹೆಂಗಸರಿಗೆ ಬಲು ಬಾಯಿ!

"ಏನೋ ಕೆ. ಕೆ, ಬೆಳಗ್ಗೇನೇ ಜವಳಿ ಅಂಗಡೀಲಿ ಸೀರೆ ಜಮಾಯಿಸ್ತಿದ್ಯಲ್ಲ ಹೆಂಡತೀಗೆ ಎಂಥ ಸೀರೆ ಕೊಂಡೆಯಪ್ಪ".

"ವ್ಯಾಪಾರ ಸರಿಬೀಳಲಿಲ್ಲ ರಂಗು. ಎಪ್ಪತ್ತು ರೂಪಾಯಿಗೆ ಒಂದು ಚಿಕ್ಕಾಸು ಕಡ್ಮೆ ಆದ್ರೂ ಕೊಡೊಲ್ಲ ಅಂತ ಕಡಾ ಖಂಡಿತವಾಗಿ ಹೇಳ್ದ. ೬೦ರ ವರಿಗೂ ನಾನು ಕೇಳಿದೆ. ಕೊಡೂಲ್ಲ ಅಂದ ಹೊರಟು ಬಂದೆ".

"ಹಾಗಾದರೆ ಸೀರೆ ತರಲಿಲ್ಲ".

"ಅವಳ ಕೈಗೇ ದುಡ್ಡು ಕೊಟ್ಟು, ನಿನಗೆ ಬೇಕಾದ ಸೀರೆ ಕೊಂಡುಕೋ ಅಂತ. ನಿನ್ನೆ ಸಂಜೆ ಅವಳೇ ಪೇಟೇಗೆ ಹೋಗಿ ಒಂದು ಸೀರೆ ತಂದಳು".

"ಎಷ್ಟು ರೂಪಾಯಿಂದು ಸೀರೆ".

"ಐವತ್ತು ರೂಪಾಯಿ....ನೋಡು ರಂಗು....ಸೀರೆ ನೋಡಿ ನಂಗೇ ಆಶ್ಚರ್ಯವಾಯಿತು. ನಾನು ಬೆಳಿಗ್ಗೆ ನೋಡಿದ್ದ ಅಂಗಡಿಯದೇ ಸೀರೆ! ಅದೇ ಬಣ್ಣ! ಅದೇ ಬಾರ್ಡರು! ೭೦ ರೂ.ಗೆ ಒಂದು ಕಾಸು ಕಡಮೆ ಆದ್ರೂ ಕೊಡಲ್ಲ ಅಂತ ನನಗೆ ಹೇಳಿದ್ದ. ಅದನ್ನೇ ಅವಳು ೫೦ಕ್ಕೆ ತಂದಿದ್ದಾಳಲ್ಲ, ರಂಗು, ಏನು ಆಶ್ಚರ್ಯ".

"ಆಶ್ಚರ್ಯ ಏನು ಬಂತೋ, ಕೆ. ಕೆ, ನೀನು ನೋಡಿದ್ದ ಸೀರೆ ಯಾವುದೋ. ನಿನ್ನ ಹೆಂಡತಿ ತಂದ ಸೀರೆ ಯಾವುದೋ. ರೇಷ್ಮೆಯಲ್ಲಿ ತುಂಬ ರಕಂ ಇರುತ್ತೆ ಮಂಕೆ".

"ಅದು ಹೇಗಾದರೂ ಇರಲಯ್ಯ. ನಾನು ನೋಡಿದ್ದ ಸೀರೆಯೇ ಅದು, ಏನು ಅನುಮಾನ್ವೂ ಇಲ್ಲ. ೭೦ ರೂ. ಅಂತ ಬರೆದ ಚೀಟಿ ಸೀರೇಲಿ ಇನ್ನೂ ತೂಗಾಡ್ತಾ ಇದೆ. ನಾನು ಬೆಳಗ್ಗೆ ಸೀರೇನ ನೋಡ್ತ ಅದನ್ನ ಹಾಗೆ ಅರ್ಧಕ್ಕೆ ಮುರಿದಿದ್ದೆ. ಅದು ಹಾಗೆ ಇದೆಯಪ್ಪ!"

"ಈಗೇನು ಬಿಡು ಲಾಭವೇ ಆಯ್ತಲ್ಲ....ನಮಗೆ ಚೌಕಾಶಿ ಮಾಡೋಕೆ ಬರೊಲ್ಲ ಕೆ. ಕೆ. ಕೇಳಿದಷ್ಟು ಕೊಟ್ಟುಬಿಡ್ತೇವೆ. ಹೆಂಗಸರಿಗೆ ಅಂದ್ರೆ ಬಲು ಬಾಯಿ–ಎಂಥ ಶೆಟ್ಟಿಯಾದರೂ ಸುಸ್ತಾಗಲೇ ಬೇಕು."

* * *

"ಏನೆ ಲೀಲು, ನಿನ್ನೆ ಪೇಟೆಗೆ ಹೋಗಿ ಸೀರೆ ಕೊಂಡುಕೊಂಡು ಬಂದೆಯಂತೆ. ೭೦ ರೂಪಾಯಿ ಬಾಳೋ ಸೀರೇನ ನೀನು ೫೦ಕ್ಕೇ ಬಾಯಿಮಾಡಿ ತಂದೆಯಂತೆ! ನನಗೂ ಹೋಗೋವಾಗ ಹೇಳಿದ್ದರೆ ಬರುತ್ತಿದ್ದನಲ್ಲೆ. ನಂಗೂ ಒಂದು ಸೀರೆ ಬೇಕಿತ್ತು".

"ಅಕ್ಕ ಪಕ್ಕದ ಮನೆಯವ್ರು ಅಂದ್ರೆ ಹಿಗೀರ್ಬೇಕು ನೋಡು! ನಾನು ಸೀರೆ ತಂದ ಸಮಾಚಾರ ನಿನಗೆ ಹೇಗೆ ಗೊತ್ತಾಯ್ತು ಸೀತು ಆಗ್ಲೆ. ಅದೂ ೫೦ಕ್ಕೇ ತಂದೆ ಅಂತ ಬೇರೆ ಹೇಳಿದೆಯಲ್ಲ. ನಿಂಗೆ ಯಾರು ಹೇಳಿದ್ರು".

"ಅಲ್ವೆ.... ನಿನ್ನ ಯಜಮಾನ್ರು ಇವತ್ತು ಬೆಳಗ್ಗೆ ಹೇಳ್ತಾ ಇದ್ರು. ಬೆಳಗ್ಗೆ ಅವರು ಒಂದು ಸೀರೇನ ನೋಡಿ ಅದರ ಬಣ್ಣ ಒಪ್ಪಿ ವ್ಯಾಪಾರ ಮಾಡಿದ್ದರಂತೆ. ೭೦ ರೂಪಾಯಿಗೆ ಒಂದು ಕಾಸು ಕಡಿಮೆಯಾದ್ರೂ ಕೊಡಲ್ಲ ಅಂತ ಅಂಗಡಿಯವನು ಹೇಳಿದ್ದನಂತೆ. ಸಂಜೆ ನೀನು ತಂದ ಸೀರೆ ಅದೇಯಂತೆ. ಅದೇ ಅಂಗಡಿಯ ದಂತೆ. ಬಿಲ್ಲುನೋಡಿ ಪೆಚ್ಚಾದ್ರೆನೇ ನಿನ್ನ ಯಜಮಾನ್ರು".

"ನನಗೆ ಈ ವಿಷಯವೇ ಗೊತ್ತಿಲ್ಲ ಕಣೆ.... ನಿನ್ನೆ ಸೀರೆ ತರೋ ಯೋಚನೆಯೇ ಇರಲಿಲ್ಲ. ಮಾರ್ಕೆಟ್ಟಿಂದ ಸ್ವಲ್ಪ ಸಾಮಾನು ತರಬೇಕಾಗಿತ್ತು. ಮಾರ್ಕೆಟ್ಟಿಂದ ಸಾಮಾನು ಕೊಂಡು ಕೊಂಡು ಬರ್‍ತಾ ಇರೋವಾಗ ದಾರೀಲಿ ಹೊಳೀತು ಸೀರೆ ಯೋಚ್ನೆ ದುಡ್ಡೇನೋ ಕೈಲಿ ತೊಗೊಂಡು ಹೋಗಿದ್ದೆ ಅನ್ನು... ಇನ್ನೊಂದು ದಿವ್ಸ ಏನು ಅಂತ ಸೀರೇನೂ ಕೊಂಡ್ಕೊಂಡು ಬಂದೆ".

"ಅದೆಲ್ಲ ಸರಿ ಲೀಲ....೫೦ ರೂಪಾಯಿಗೇ ಭಾರಿ ಸೀರೆ ತಂದ್ಯಂತಲ್ಲ. ನಿನ್ನ ಯಜಮಾನ್ರು ನಿನ್ನ ಬಹಳ ಹೊಗಳಿದ್ರು ಕಣೆ".

"ಅದು ಹೇಗೋ ಅಮ್ಮ ನನಗೆ ತಿಳೀದು!.... ಈ ಸೀರೆ ಮೇಲೇನೋ ೭೦ ರೂಪಾಯಿ ಅಂತ ಬರದ ಚೀಟಿ ಇತ್ತು. ನಾನು ಈ ಸೀರೆ ತೋರುಸ್ತ—'ಎಷ್ಟ್ರೀ ಈ ಸೀರೆ ಬೆಲೆ? ಇದನ್ನು ಪ್ಯಾಕ್ ಮಾಡಿಸ್ರಿ ಬೇಗ' ಅಂದೆ. ಅವನು ತುಟಿ ಪಿಟಕ್ ಅನ್ನದೆ ನನ್ನೇ ನೋಡ್ತಾ 'ಐವತ್ತು ರೂಪಾಯಿ' ಅಮ್ಮ ಅಂದ! ಸೀರೆ ಪ್ಯಾಕ್ ಮಾಡಿಸಿ ಕೈಗೆ ಕೊಟ್ಟ. ನಾನೇನೂ ಚೌಕಾಶಿ ಮಾಡ್ಲಿಲ್ಲ".

* * *

"ಏನೆ ಲೀಲು ...ಪೇಟೇಲಿ ನಿನ್ನೆ ನಿನ್ನ ಅವತಾರ. ಗೃಹಿಣಿ ಅಂದರೆ ಚೆನ್ನಾಗಿ ಒಪ್ಪುತ್ತೆ ಕಣೆ ನಿನಗೆ" ಎಂದಳು ಲೀಲು ಸ್ನೇಹಿತೆ ಕಮಲು, ಮನೆಗೆ ಬಂದು.

"ನೋಡಿದ್ರೂ ಯಾಕೆ ಮಾತಾಡಿಸಲಿಲ್ವೆ. ನೀನೂ ಸಿಕ್ಕಿದ್ದರೆ ಮಲ್ಲೇಶ್ವರಕ್ಕೆ ಹೋಗಿ ಬರಬಹುದಾಗಿತ್ತಲ್ಲೆ" ಎಂದು ಜವಾಬು ಕೊಟ್ಟಳು ಲೀಲು.

"ನನಗೆ ಎಲ್ಲಿ ಧೈರ್ಯ ಬರಬೇಕಮ್ಮ, ನಿನ್ನ ಸ್ಥಿತೀಲಿ ಮಾತೋಡ್ಸೋಕೆ. ಈಚಲು ಪರಕೇನ ಹಿಡಿದುಕೊಂಡು ಚಿಕ್ಕಪೇಟೇಲಿ ಆ ಜನ ಜಂಗುಳಿ ಮಧ್ಯೆ ಸರ ಸರ ಅಂತ ಹೋಗ್ತಾ ಇದ್ದೆಯಲ್ಲ. ನಿನಗೆ ಸ್ವಲ್ಪವೂ ನಾಚಿಕೆ ಆಗ್ಲಿಲ್ವೇನೆ" ಎಂದು ಕೇಳಿದಳು ಕಮಲು

"ನಾಚಿಕೆ ಯಾಕೆ....ಮನೇಗೆ ಪರಕೆ ಬೇಕಿತ್ತು. ಮಾರ್ಕೆಟ್‌ನಲ್ಲಿ ಕೊಂಡು ಕೊಂಡು ತರ್‍ತಾ ಇದ್ದೆ. ಆಗ ನೀನು ನನ್ನ ನೋಡಿರಬಹುದು." ಎಂದಳು ಲೀಲು.

—ಹಾ. ರಾ.

ಅಯ್ಯಯ್ಯೋ !

ಶಾಂತಾ, ರಾಮು, ಅವರ ಮನೆಗೆ ಹೋದಾಗ, ಕೋಡಬಳೆ ವಾಸನೆ ಗೇಟಿನಲ್ಲೇ ಹೊಡೆಯಿತು. ಭಾನುವಾರ ಮಧ್ಯಾಹ್ನ ಮೂರು ಮೂರುವರೆ ಇರಬಹುದು. ಮಳೆ ನಿಂತಮೇಲೆ ಅವರ ಮನೆಗೆ ಹೊರಟೆವು—ನಾನೂ ನನ್ನ 'ದಂ'.

ಶಾಂತಾ ನನ್ನ 'ದಂ' ಅನ್ನು ಅಡಿಗೇ ಮನೆಗೇ ಕರೆದುಕೊಂಡು ಹೋದಳು. ನಾನು ರಾಮುವಿನ ಜತೆ, ಹಳೆ ಕಾಲದ ಮಾತನಾಡಲು ಶುರು ಮಾಡಿದೆ.

ಊಟದ ತಟ್ಟೇಲಿ ಕೋಡುಬಳೆ, ಒಂದು ಥರ್ಮಾಸ್‌ಫ್ಲಾಸ್ಕಿನಲ್ಲಿ ಕಾಫಿ, ನಾಲ್ಕು ಬಟ್ಟಲು, ಒಂದು ಮೇಜಿನಮೇಲೆ ಎರಡು ಹೆಣ್ಣುಗಳಿಂದ ಇಡಲ್ಪಟ್ಟವು ಸುತ್ತಲೂ ನಾಲ್ಕು ಕುರ್ಚೀನ ಇಬ್ಬರು ಗಂಡಸರೂ ಹಾಕಿದೆವು.

ಕೋಡುಬಳೆಯೊಳಕ್ಕೆ ಒಂದು ಬೆರಳು ತೂರಿಸಿ ತೆಗೆದುಕೊಂಡು ಅದನ್ನು ಚೂರು ಚೂರಾಗಿ ತಿನ್ನುತ್ತಾ ಮಾತನಾಡಲು ಆರಂಭಿಸಿದೆವು.

ನಾನಂದೆ "ಶಾಂತಾ! ನೀನೇ ಪುಣ್ಯವಂತೆ! ನಿನಗೆ ದೇವರು ಇಷ್ಟು ರುಚಿಯಾದ ಕೋಡುಬಳೆ ಮಾಡೋ ಹಸ್ತಗುಣ ಕೊಟ್ಟಿದ್ದಾನೆ" ಎಂದು.

ಶಾಂತಾ ಅಂದಳು "ನಿಮ್ಮ ಸ್ನೇಹಿತ ಮಲ್ಲಪ್ಪ ಕೂಡ ಹೀಗೇ ಅಂತಾ ಇದ್ದರ್ರೀ" ಎಂದು.

ನನ್ನ 'ದಂ' ಕೇಳಿದಳು "ಯಾವ ಮಲ್ಲಪ್ಪ" ಎಂದು.

ರಾಮು ಹೇಳಿದ "ನಮ್ಮ ಜತೆಯಲ್ಲಿ ಓದಿದ ಸ್ನೇಹಿತ ಮಲೆನಾಡಿನವ. ಬಲು ಒಳ್ಳೆಯವ. ಅಲ್ಲೆಲ್ಲೋ ಗಂಧದ ಮರದ ಕಾಡಿನಲ್ಲಿ ಹುಲಿಗಳ ಮಧ್ಯೆ, ಕಾಳಿಂಗ ಸರ್ಪ ಇರುವ ಮನೆಯಲ್ಲಿ ಜೀವನ ಸುಖವಾಗಿ ಸಾಗಿಸ್ತಾ ಇದ್ದಾನೆ. ವರ್ಷಕ್ಕೆ ಎರಡು ಸಾವಿರ ಕಂದಾಯ ಕಟ್ಟುತ್ತಾನೆ" ಎಂದು. ನನ್ನ 'ದಂ' ನನ್ನ ಕಡೆ ನೋಡಿದಳು. ನಾನು ಅವಳ ಕಡೆ ನೋಡಿದೆ.

ಶಾಂತಾ ಇದನ್ನು ನೋಡಿ ರಾಮುವನ್ನು ನೋಡಿದಳು, ರಾಮು ಶಾಂತಳನ್ನ ನೋಡಿದ. ಇಬ್ಬರೂ ನಮ್ಮನ್ನೂ ನೋಡಿದರು.

'ದಂ' ಹೇಳಿದಳು. "ಯಾರೂ ಅಂದ್ರೆ! ಮಲ್ಲಪ್ಪ ಅಂದರೆ, ಈವತ್ತು ಪೇಪರಿನಲ್ಲಿ ಹಾಕಿತ್ತಲ್ಲಾ ಮಂತ್ರಿಯಾದರು ಅಂತ ಸೊರಬದ ಕಡೆಯೋರು, ಅವರೇನೇ?" ಎಂದು.

"ಅಯ್ಯೋ" ಅಂದ ರಾಮು.

"ಅಯ್ಯಯೋ" ಎಂದಳು ಶಾಂತಾ.

"ಯಾಕೆ? ಹೀಗೆ ಖಿನ್ನರಾದಿರಿ" ಎಂದೆ ನಾನು.

"ನಮ್ಮ ಮಲ್ಲಪ್ಪ ಮಂತ್ರಿಯಾದರೆ, ನಮ್ಮೂರಿಗೆ ಬಂದು ಠಿಕಾಣಿ ಹಾಕ್ತಾನೆ, ಅಂದ ಮೇಲೆ ನಮ್ಮನೆಗೇ ಬಂದೇ ಬರ್ತಾನೆ" ಎಂದ ರಾಮು.

"ಅದರಿಂದ ನಿನಗೇನು ಗುನುಗು. ನೀನೂ ಅವನ ನೆರಳಲ್ಲಿ, ಅವನ ಹೆಸರು ಹೇಳಿ ಶಾಖಾಯ ಲವಣಾಯ ಮಾಡಿಕೋಬಹುದು" ಎಂದೆ ನಾನು.

"ನೀನೂ ಹಾಗೇ ಅಲ್ಲವೇ? ನಿಮ್ಮನೇಗೂ ಬರ್ತಾಇರ್ತಾನೆ ನೀನೂ ಅವನ ಸಹಪಾಠಿ" ಎಂದ ರಾಮು.

ಆಗ ದಂ ಹೇಳಿದಳು, ಸತ್ಯವನ್ನ. "ನಮ್ಮನೇಗೇ ಯಾಕೆ ಮಲ್ಲಪ್ಪ ಬಂದಾನು. ನನಗೆ ಆಡುಗೇನೇ ಬರುಲ್ಲ. ಹಾಗೆ ಬಂದರೂ ನಮ್ಮನ್ನೂ ಕರೆದು ಕೊಂಡು ನಿಮ್ಮನೇಗೇ ಬರ್ತಾನೆ ಕೋಡುಬಳೆ ಆಶೆಗಾಗಿ" ಎಂದು.

ಅದಕ್ಕೇ "ಅಯ್ಯಯ್ಯೊ!" ಎಂದು ನಾನಂದಿದ್ದು ಎಂದಳು. ಶಾಂತಾ. ಇನ್ನು ಹಿಟ್ಟು ತಿರುವಿ ತಿರುವಿ ನನ್ನ ತೋಳು ಸುಸ್ತಾಗುತ್ತೆ, ವಾರಕ್ಕೆ ಮೂರಾವರ್ತಿ ಯಾದರೂ ಈ ಕೆಲಸ ನಂಗೆ ತಪ್ಪಿದ್ದಲ್ಲಾ. ಈ ಕೆಟ್ಟ ಸುದ್ದಿ ದಿಟವೇ ಎಂದಳು.

"ಹಾಗಲ್ಲಾ ಶಾಂತಾ! ಇದರಿಂದ ನಿಮ್ಮ ಪುರೋಭಿವೃದ್ಧಿ ಯೋಚಿಸಲೇ ಇಲ್ಲ ವಲ್ಲಾ" ಎಂದಳು ನನ್ನ ದಂ.

"ಅಯ್ಯೋ" ಎಂದ ರಾಮು.

"ಅಯ್ಯಯ್ಯೋ" ಎಂದು ದನಿಗೂಡಿಸಿ ಅನುಪಲ್ಲವಿ ಹಾಡಿದಳು ಶಾಂತಾ.

ಸ್ನೇಹಿತರಿಗೆ, ಅಧಿಕಾರ ಬಂದರೆ ಸ್ನೇಹಿತರು ಹಿಗ್ಗುವುದು ಸಹಜ. ಆದರೆ ಈ ರೀತಿ 'ಅಯ್ಯೋ' 'ಅಯ್ಯಯೋ' ಎಂದು ಪರಿತಪಿಸುವ ಪರಿಸ್ಥಿತಿಯೂ ಉಂಟಾಗ ಬಹುದೇ ಎಂದು ಹಿಂತಿರುಗುವಾಗ 'ದಂ'ಗೆ ನಾನು ಹೇಳಿದೆ.

"ಆ ಕೋಡುಬಳೆ ರುಚಿ ಹತ್ತಿದಮೇಲೆ ಯಾವ ಪರಿಸ್ಥಿತಿಯೂ, ಒದಗ ಬಹುದು. ಶಾಂತನ್ನ ನಾನು ಕೇಳಿದೆ ಈ ರುಚಿ ಬರಲು ಏನಾದರೂ ಕೋಳಿಮೊಟ್ಟೆ ಹಾಕುತ್ತೀಯಾ ಎಂದು. ಅವಳಂದಳು ಹಾಕಿದರೇನಂತೆ ಎಂದು ಹಾಗಾದರೆ ಈ ಸುದ್ದಿ ಮಂತ್ರಿ ಮಲ್ಲಪ್ಪನಿಗೆ ತಿಳಿಸು, ಆತ ಖಂಡಿತ ಬಸವನ್ನನಾಣೆ, ಸಿದ್ಧರಾಮನಾಣೆ, ಕೋಡುಬಳೆ ತಿನ್ನುಲ್ಲ ಅಂತ. ಅವಳೂ ನಕ್ಕು ಒಳ್ಳೇ ಉಪಾಯ ಕಣೆ" ಎಂದಳು. ನೀವು ಊಹಿಸಿದ ಪರಿಸ್ಥಿತಿ ಒದಗಲಾರದು ಎಂದು 'ದಂ' ನನಗೆ ಭರವಸೆ ಕೊಟ್ಟಳು.

—ಕುಮಾರ್.

ಸ್ನೇಹಿತಳ ಕಾಗದ

ತಂಪಾಪುರ,
ಶಿವಮೊಗ್ಗ
ಮಂಗಳವಾರ, ಶ್ರಾವಣ ಮಾಸ

ಪ್ರಿಯ ಕಮಲ,

ಎರಡು ತಿಂಗಳಿಂದಲೂ ನಿನ್ನ ಕಾಗದವೇ ಬರಲಿಲ್ಲ. ಸೆಪ್ಟೆಂಬರ್ ಪರೀಕ್ಷೆಗೆ ಬಹಳ ಓದುತ್ತಾ ಇದ್ದಿ ಅಂತ ಕಾಣುತ್ತೆ. ಹಾಗೆ ಹೆಚ್ಚಾಗಿ ಓದಬೇಡಮ್ಮಾ! ಕಣ್ಣಿಗೆ ಅಪಾಯ! ಹೇಗೂ ಮದುವೆಯಾಗಿ ಗಂಡನ ಮನೆಗೆ ಹೋದಾಗ ಪುಸ್ತಕದ ಬದನೇಕಾಯಾದರೆ ಏನು ಪ್ರಯೋಜನ.

ಸದ್ಯ ಹೋದ ಸಲ ನನಗೆ ಪ್ಯಾಸಾದ ಕಾರಣ ಇನ್ನು ಓದೋ ಗೋಜಿಲ್ಲ. ಈಗ ಇವರ ಜತೆಯಲ್ಲಿ ಬಂದು ಮೂರು ತಿಂಗಳಾಯ್ತು. ಮಲನಾಡೇ ಚೆನ್ನ ನೋಡು. ಹಳೇ ಮನೆತನಗಳು. ಹಳೇ ಸಂಪ್ರದಾಯ ಬಿಟ್ಟಿಲ್ಲ. ಈಗ ನನ್ನ ಕೈಲಿ ಮಂಗಳ ಗೌರೀ ಪೂಜೆ ಮಾಡಿಸುತ್ತಾ ಇದ್ದಾರೆ, ನಮ್ಮತ್ತೆ. ಅದಕ್ಕೇ ಸ್ಪೆಷಲ್ಲಾಗಿ "ತಂಬಿಟ್ಟು" ಎಂಬೋ ಪದಾರ್ಥವನ್ನು ಮಾಡುತ್ತಾರೆ. ನಮ್ಮ ಕ್ಯಾಂಟೀನ್‌ನಲ್ಲಿ ಬಾದಾಂ ಹಲ್ವಾ ಅಂತ ಮಾಡುತ್ತಿದ್ದಿಲ್ಲವೇ? ನೀನು ಬಲು ರುಚಿ ಎಂದು ಎರಡು ಪ್ಲೇಟು ಹೊಡೀತಿದ್ದಿಲ್ಲವೇ? ಅದು ಈ ತಂಬಿಟ್ಟಿನ ಮುಂದೆ ನಿಸ್ಸಾರ ನೋಡು. ಮಡೀಲಿ, ಬರೀ ಹೊಟ್ಟೇಲಿ, ಒಂದೇ ಮನಸ್ಸಿನಿಂದ ಪೂಜೆ ಮಾಡಮ್ಮಾ ಅಂತ ಅತ್ತೆಮ್ಮನವರು ಈ ತಂಬಿಟ್ಟಿನ ಪಾತ್ರೆಯನ್ನು ನೈವೇದ್ಯಕ್ಕೆ ಇಟ್ಟು ಅಡಿಗೆ ಮನೆಗೆ ಹೋದರು. ಗೆಜ್ಜೆವಸ್ತ್ರ ಮಾಡೋ ಹೊತ್ತಿಗೆ ಪುರೋಹಿತರು ಬರ್ತಾರಮ್ಮಾ ಅಂತ ಹೇಳಿ ಹೋದರು. ಗೆಜ್ಜೆವಸ್ತ್ರ ಮಾಡ್ತಾ, ಬರೀ ಹೊಟ್ಟೇಲಿ, ಸ್ನಾನಮಾಡಿ, ಕುಳಿತಿದ್ದೆ ಕಲಶದೆದುರಿಗೆ. ಆ ಪಾತ್ರೆಯಿಂದ ಘಮ ಘಮ ವಾಸನೆ ಬಡಿಯಿತು. ಒಂದೇ ಮನಸ್ಸಿನಿಂದ ಹೇಗಪ್ಪಾ ದೇವರೇ ಪೂಜೆ ಮಾಡೋದು, ಈಗ ಮನಸ್ಸೆಲ್ಲಾ ತಂಬಿಟ್ಟಿನ ಮೇಲೇ ಇದೆಯಲ್ಲಾ ಎಂದಂದುಕೊಂಡಿದ್ದೆ. ಪುರೋಹಿತರು ಬರಲೇ ಇಲ್ಲ. ಗೆಜ್ಜೆ ವಸ್ತ್ರ ಮುಗಿದೂ ಹೋಯಿತು. ಸುತ್ತಲೂ ಯಾರೂ ಕಾಣಿಸಲಿಲ್ಲ ಒಂದು ಗಜ್ಜುಗದ ಗಾತ್ರ ತಂಬಿಟ್ಟನ್ನ ಗಬಕ್ಕಂತ ತೆಗೆದು ಗಳಕ್ಕಂತ ನುಂಗಿದೆ. ನಿಜಕ್ಕೂ ಹೇಳ್ತೀನೆ ಕೇಳು, ಸ್ವರ್ಗ ಸುಖ ಕೊಡೋದು ಯಾವುದು ಅಂದರೆ ತಂಬಿಟ್ಟು ಅಂತ ಖಡಾಖಂಡಿತವಾಗಿ ಹೇಳಬಲ್ಲೆ. ಪುರೋಹಿತರು ಬರೋ ಹೊತ್ತಿಗೆ ಅರ್ಧ ಪಾತ್ರೆ ಆಗಿದ್ದಿರಬಹುದು. ಪೂಜೆ ಆಯಿತು.

ಊಟ ಆಯಿತು. "ಯಾಕಮ್ಮಾ! ಸರಿಯಾಗಿ ಊಟಮಾಡುಲ್ಲ" ಅಂತ ಅತ್ತೆಮ್ಮ ನವರು ಬಲಾತ್ಕರಿಸಿದರು. ಪೇಟೇ ಹುಡುಗಿಯರು, ಓದಿದ ಹುಡುಗಿಯರು ಉಪವಾಸ ಇದ್ದು ಪೂಜೆ ಮಾಡಲು ಕೂಡ ಶಕ್ತಿ ಇಲ್ಲ, ಮುಂದಿನ ಮಂಗಳವಾರಕ್ಕೆ ಬೆಳಿಗ್ಗೇ ಏಳು ಗಂಟೆಗೇ ಪೂಜೆ ಮುಗಿಸುವಂತೆ ಮಾಡುತ್ತೇನಮ್ಮಾ ಅಂದರು. ಸಾಯಂಕಾಲ ಹೊಟ್ಟೆ ನೋವುಕ್ಕೆ ಶುರುವಾಯ್ತು. ಬಿಸಿ ನೀರು ಶಾಖ ಕೊಟ್ಟರು ಹೊಟ್ಟೆಗೆ. ಏನಾದರೂ ಮಡಿಗಿಡಿ ಕೆಡಿಸಿಕೊಂಡೆಯೇನಮ್ಮಾ, ಪೂಜೆ ಹೊತ್ತಿಗೆ ಮಡಿ ತಪ್ಪಿದರೂ ದೇವರು ಹೊಟ್ಟೆನೋವು ಕೊಡ್ತಾನಮ್ಮಾ, ಹಾಗಾದರೆ ಮುಡುಪು ಕಟ್ಟಿದರೆ ಹೋಗುತ್ತೆ ಎಂದರು. ಕಡೆಗೆ ಅವರಿಗೇನು ತೋಚಿತೋ ಮುಡುಪು ಕಟ್ಟಿದರು. ನನ್ನ ಹೊಟ್ಟೆನೋವೂ ನಿಂತಿತು. ಎರಡು ನಿಮಿಷ ಮಲಗಿರಮ್ಮಾ ಅಂತ ಆಕೆ ಹೊರಟುಹೋದರು. ಮಲಗಿರುಕ್ಕೆ ಬೇಜಾರಾಗಿ ಈ ಕಾಗದ ಬರೆದೆ. ನಿನ್ನ ನೆನಪಾಯ್ತು ಆ ತಂಬಿಟ್ಟಿನ ನೆನಪಿನೊಂದಿಗೆ. ಹೆಸರೇನೋ ತಂಪು ಹಿಟ್ಟು. ಆದರೆ ಹಾಳು ಹೊಟ್ಟೇಲಿ ತಿಂದರೆ ರಾಗೀ ಹಿಟ್ಟಿಗೂ ಕಠಿಣ— ಆದರೆ ಅರೆ ತುಂಬಿದ ಹೊಟ್ಟೇಗೆ ತಂಬಿಟ್ಟು ದಿಟವಾಗಲೂ ತಂಪು. ನಿನಗೆ ಕಳುಹಿಸುವುದಕ್ಕಾದರೆ ಕಳಿಸಿ ಕೊಡ್ತೇನೆ. ನನ್ನ ಸ್ನೇಹಿತರಿಗೆಲ್ಲಾ ನೆನಪುಕೊಡು.

ಚೀರಿಯೋ ನಿನ್ನವಳೇ ಆದ,

ಸುನೀತಿ.



"ಕಿನ್ಸೆ" ವರದಿ ಬಂದಮೇಲೆ ನಮ್ಮನ್ನ ಕಾಮಾಕ್ಷಿ ಅಂತ ಯಾರೂ ಕರೆಯೋದಿಲ್ಲ!!

ನೆಗಡಿ

ಮೂಗಿದ್ದರೆ ನೆಗಡಿ ತಪ್ಪಿದ್ದಲ್ಲ, ಎನ್ನುತ್ತಾರೆ. ಆದರೂ, ದೇವತೆಗಳಿಗೂ ಹರಿಹರ ಬ್ರಹ್ಮಾದಿಗಳಿಗೂ ಸುರಾಸುರರಿಗೂ, ರಾಮ ರಾವಣಾದಿಗಳಿಗೂ, ನೆಗಡಿ ಬರುತ್ತೆಂದು ಶ್ರುತಿ ಸ್ಮೃತಿಗಳಲ್ಲೆಲ್ಲೂ ಉಲ್ಲೇಖಿತವಾಗಿಲ್ಲ. ಅದೇನು ಮಾಡೀತು, ಎಂದು ಅವರೂ ಅದನ್ನು ನಿರ್ಲಕ್ಷಿಸಿರಬೇಕು; ಇಲ್ಲದಿದ್ದರೆ, ಚರಕ ಶುಶ್ರುತಾದಿಗಳು ಅದಕ್ಕೆ ಔಷಧವನ್ನು ಹೇಳಿರುವರು. ಶೂರ್ಪನಖೆಯ ನಾಸಚ್ಛೇದವಾದ ಮೇಲೆ, ಅವಳಿಗೆ ನೆಗಡಿ ಬಂದಿತ್ತೋ ಏನೊ, ವಾಲ್ಮೀಕಿ ಹೇಳಿಲ್ಲ. ಹೇಳಿದ್ದರೂ ಮೂಗು ಕೊಯ್ಯುವ ಮೊದಲು ಅವಳಿಗೆ ನೆಗಡಿ ಬರುತ್ತಿದ್ದು, ನಂತರ ಬರಲಿಲ್ಲವೆಂದರೆ ತಾನೆ, ನಾವು ಮೂಗಿಗೂ ನೆಗಡಿಗೂ ನಿಕಟ ಸಂಬಂಧವನ್ನು ಕಲ್ಪಿಸಲು ಸಾಧ್ಯ?

ಆದರೂ, ಮೂಗಿಗೂ ನೆಗಡಿಗೂ ಕೇವಲ ತಾತ್ಕಾಲಿಕ ಸಂಬಂಧವೇ ಹೊರತು, ಕಾರ್ಯಕಾರಣ ಸಂಬಂಧವಿಲ್ಲವೆಂದು ನಾವು ಧಾರಾಳವಾಗಿ ಹೇಳಬಹುದು. ಏಕೆಂದರೆ, ಉದ್ದ ಮೂಗಿನವರಿಗೆ ಉದ್ದನೆಗಡಿ, ಚಪ್ಪಟೆ ಮೂಗಿನವರಿಗೆ ಚಪ್ಪಟೆ ನೆಗಡಿ, ಗಿಣಿ ಮೂಗಿನವರಿಗೆ ಗಿಣಿ ನೆಗಡಿ ಎಂದಿಲ್ಲ. ಯಾಕೆ, ಗಿಣಿಗೆ ನೆಗಡಿಯೇ ಬರುವುದಿಲ್ಲವಂತೆ. ಮಾನವನ ಹತ್ತಿರ ಸಂಬಂಧಿಯಾದ ಕಪಿಗೆ ಮಾನವನಷ್ಟೆ ನೆಗಡಿಯ ಬಾಧೆ ಉಂಟಂತೆ—ಕಪಿಯ ಮೂಗಿನ ಮಟ್ಟ ಮಾನವನಷ್ಟಿಲ್ಲದಿದ್ದರೂ.

ನೆಗಡಿಗೆ ಶೀತ ಎನ್ನುತ್ತಾರೆ. ಆದರೆ, ಉತ್ತರ ಧ್ರುವ ದಕ್ಷಿಣ ಧ್ರುವ ಪ್ರದೇಶಗಳಲ್ಲಿರುವಷ್ಟು ಶೀತ ಇನ್ನೆಲ್ಲೂ ಇಲ್ಲ, ಜಗತ್ತಿನಲ್ಲಿ. ಅಲ್ಲಿ ಯಾರಿಗೂ ನೆಗಡಿಯ ಭಯವೇ ಇಲ್ಲ. ತೇನ್‌ಸಿಂಗನಿಗೆ ನೆಗಡಿ ಹಿಡಿದದ್ದು ಎವರೆಸ್ಟ್ ಶಿಖರದ ಮೇಲಲ್ಲ; ಅಲ್ಲಿಂದ ಇಳಿದು ಕಲ್ಕತ್ತಾದ ಈಡನ್ ಉದ್ಯಾನವನಕ್ಕೆ ಬಂದಾಗ! ಮಲೆಯಾಳಿಗೂ ತಮಿಳರಿಗೂ ನೆಗಡಿಗೆ "ಜಲದೋಷಂ" ಎನ್ನುತ್ತಾರೆ. ಆದರೆ, ಮದ್ರಾಸ್ ನಗರದ ಮುನಿಸಿಪಲ್ ನೀರನ್ನುಪಯೋಗಿಸುವವರ ಪೈಕಿ ಶೇಕಡ 80 ಜನಕ್ಕೆ ಶೇಕಡ 90 ರಷ್ಟು ದಿನ ನೆಗಡಿಯ ಕಾಲ ಇಲ್ಲ. ಆದ್ದರಿಂದ, ಕೆಟ್ಟ ನೀರಿಗೂ ನೆಗಡಿಗೂ ಸಂಬಂಧವಿಲ್ಲವೆಂದು ನಿಶ್ಚಯಿಸಬಹುದು. ಅಲ್ಲದೆ, ಆಯುರ್ವೇದ ವೈದ್ಯರು, ಶೀತದ ನೆಗಡಿ ಉಷ್ಣದ ನೆಗಡಿ ಎಂದು ಸಮಯಾನುಸಾರ ಹೇಳುತ್ತಾರೆ. ಆದ್ದರಿಂದ ನೆಗಡಿಗೆ ಶೀತವಾಗಲಿ ಉಷ್ಣವಾಗಲಿ, ನೀರಾಗಲಿ, ಕಾರಣವಲ್ಲವೆಂಬುದು ಸ್ಪಷ್ಟ. ಅದಕ್ಕೆ ಮೂಗೂ ಬೇಕಿಲ್ಲ, ಮೆದುಳೂ ಬೇಕಿಲ್ಲ.

ನೆಗಡಿಗೆ ಔಷಧೀನೂ ಬೇಕಿಲ್ಲ. ಅದು ಸ್ವಯಂಭು; ಇಚ್ಛಾವಿಲಾಸಿ. ಬಂದಾಗ ಬರುತ್ತೆ; ಹೋಗಬೇಕು ಎನಿಸಿದಾಗ ಹೋಗುತ್ತೆ; ನೆಗಡಿ ನಮ್ಮ ನೆಂಟ. ಅದನ್ನು ಉಪಚರಿಸಿದಷ್ಟು ಅದು ಊರಿಕೊಳ್ಳುತ್ತೆ ತಲೆಗೆ ಪಟ್ಟುಹಾಕಿ, ಮೂಗಿಗೆ ನಶ್ಯ ತುಂಬಿ, ಗಂಟಲಿಗೆ ತೈಲ ಉಜ್ಜಿ, ಎದೆಗೆ ಉಣ್ಣೆ ಹೊದ್ದಿಸಿ, ಆರಾಮವಾಗಿ ನಾವು ನೆಗಡಿಯನ್ನು ಮಲಗಿಸಿ, ಮೂಗಿಗೆ ಅರಿವಿ ಹಿಡಿದರೆ, ಅದು ರಾಜಾರೋಷವಾಗಿ, ಕೂತೇ ಇರುತ್ತದೆ. ಕಂಡ ಕಂಡವರೆದುರಿಗೆಲ್ಲ ಕಣ್ಣು ಕೆಂಚಗೆ ಮಾಡಿ, "ನನಗೆ ನೆಗಡಿ ಬಂದಿದೆ" ಅಂತ ಅದರ ಆಗಮನವನ್ನು ಡಂಗುರ ಹೊಡೆದರೆ, ಅದು ನಮ್ಮ ತಲೆಯನ್ನು ಮೆಟ್ಟಿ ಕುತ್ತಿಗೆ ಮೇಲೆ ಕೂತು ಮೂಗು ಹಿಂಡಿಸುತ್ತದೆ.

ನೆಗಡಿ ಬರುತ್ತಲೂ, ನಮ್ಮನ್ನ ಹೀಗೆ ಡಂಗುರ ಬಡಿವಂತೆ ಪ್ರೇರೇಪಿಸುವುದೂ ನೆಗಡಿಯ ತಂತ್ರವೇ. ನಾಲ್ಕು ಜನರ ನಡುವೆ ಕೂತು ಶೀತರೆ, ನೆಗಡಿ ನಮ್ಮ ಮೂಗಿಂದ ಅವರೆಲ್ಲರ ಮೂಗಿಗೂ ನುಗ್ಗುತ್ತೆ. ಅವರನ್ನೂ ತನ್ನ ಪಶುವಾಗಿಸಿ ಮೆರೆಯುತ್ತೆ.

ನಮಗೆ ನೆಗಡಿ ಬರುವುದು ಮಳೆಯಿಂದಲ್ಲ, ಮಂಜಿನದಲ್ಲ, ನಮ್ಮ ಆಹಾರ ವಿಹಾರಗಳಿಂದಲ್ಲ- ಮತ್ತೊಬ್ಬರು ಶೀತದ್ದರಿಂದ, ಎಂಬುದು ಈಗ ವೈಜ್ಞಾನ ಪ್ರಸಿದ್ಧವಾಗಿದೆ. ಹಾಗಾದರೆ, ಮೊದಲು ಶೀತವರಾರು ? ಭೀಷ್ಮ ನೆಗಡಿ ಎಂಬ ಗಾದೆ ಇರುವುದರಿಂದ, ಆತ ಇರಬಹುದೆ ? ಲಂಕೆಯಿಂದ ಅಂಜನೇಯನೇನಾದರೂ ನೆಗಡಿಯನ್ನು ತಂದು ಭಾರತದಲ್ಲಿ ಹರಡಿಸಿದನೆ ? ಬಲ್ಲವರಾರು ? ಸಂಜೀವಿನೀ ಪರ್ವತಕ್ಕೂ ಒಗ್ಗದ ಖಾಯಿಲೆ ಎಂದರೆ ನೆಗಡಿಯೇ ಸರಿ ....ಆದರೆ, ಮೊತ್ತಮೊದಲು ಶೀತು, ಆ ಶೀನಿನಿಂದ ನಾಸಾನಾಸಿಕಯಾ ಪ್ರಪಂಚಕ್ಕೆಲ್ಲ ಈ ಹಾಳು ನೆಗಡಿಯನ್ನು ಹರಡಿಸಿದವನ ಉದ್ದೇಶವೇನೆಂಬುದನ್ನು ಮಾತ್ರ ನಾವು ಹೇಳಬಹುದು. ಆತ ಶೀತದ್ದು, ಯಾರದೋ ಶಕುನ ಕೆಡಿಸುವುದಕ್ಕಾಗಿ.

—ಪಾಟೂಳಿ.



ಮೈಸೂರು ಪುರೋಹಿತರಿಗೆ—ಬಳ್ಳಾರೀಲಿ ಸುಖಅಂತ ಇಲ್ಲಿಗೆ ಬಂದದ್ದು ಅಷ್ಟು ಚೆನ್ನಿಲ್ಲ ಅಲ್ವೇ !

ನವ್ಯಕಾವ್ಯ ಬರೆಯ ಬೇಕೆ?

ಬನ್ನಿ! ನಾನು ಹೇಳಿಕೊಡುತ್ತೇನೆ. ಅದಕ್ಕೆ ಅತೀ ಸುಲಭದ ದಾರಿ....ಕವಿ ಎಂದರೆ, ಮಂತ್ರದ್ರಷ್ಟ ಎಂದು ವೇದಗಳು ಹೇಳಿದವು. ರವಿ ಕಾಣದ್ದನ್ನು ಕವಿ ಕಂಡ, ಎಂದು ಹೇಳಿದರು ಒಬ್ಬರು. ಕಸವನ್ನೂ ರಸವಾಗಿಸಬಲ್ಲ ರಸರುಷಿ, ಎಂದ ರಿನ್ನೊಬ್ಬರು. ಕವಿಗೆ ಇತಿಯಿಲ್ಲ ಮಿತಿಯಿಲ್ಲ, ಕಾವ್ಯಕೆ ಗತಿಯಿಲ್ಲ ಯತಿಇಲ್ಲ, ಪ್ರಾಸವಿಲ್ಲ, ತ್ರಾಸವಿಲ್ಲ, ಎಂದು ಮತ್ತೊಬ್ಬರು.

ಕಾವ್ಯ ಕಟ್ಟುವುದನ್ನು ದೇಶದ ರಾಗಿಕಲ್ಲುಗಳೇ ಮಾಡಿವೆ; ಕುಳಿತೋದೆಯುಂ ಪರಿಣತ ಮತಿಗಳ್ ಕನ್ನಡಿಗರು. ಸರಳ ರೀತಿಯ ರಗಳೆ ಎಬ್ಬಿಸಿದರು, ನಮ್ಮ ಹಿರಿಯರು ನಾವೇಕೆ ರಗಳೆ ರೀತಿಯಲ್ಲಿ ರಗಳೆ ಎಬ್ಬಿಸಬಾರದು? ಎಲಿಯಟ್ಟೊಬ್ಬನೇ ಕವನ ಕಟ್ಟಬಲ್ಲನೇನು?

ಬನ್ನಿ! ನವ್ಯ ಕಾವ್ಯದ ಭವ್ಯ ಹವ್ಯವನ್ನು ನಾವೂ ಬೇಯಿಸೋಣ. ನವ್ಯ ಕವಿಗೆ ಅಗತ್ಯ ಬೇಕಾದ ವಸ್ತುಗಳು ಎರಡು, ಮೂರಲ್ಲ. ಮೂರನೆಯದಾದ "ಓದುಗ"ನನ್ನು ಕಟ್ಟಿಕೊಂಡು ನಮಗೇನು? ಓದು ಕಲಿತ ತಪ್ಪಿಗೆ, ಕವನ ಅಚ್ಚಾದ ತಪ್ಪಿಗೆ, ಅವನು ಅದನ್ನು ಎಂದಾದರೊಂದುದಿನ ಓದಿದರೆ, ಓದಲಿ, ಓದಿ ಬದುಕಿದರೆ ಬದುಕಲಿ. ಎರಡು ವಸ್ತುಗಳು ಯಾವುವೆಂದರೆ, ಒರೆಯುವುದಕ್ಕೊಂದು ಬರೆಸಿಕೊಳ್ಳುವುದಕ್ಕೊಂದು ಹಿಂದಿನ ಕಾವ್ಯಗಳು ಕವಿಯ ತಲೆಯೊಳಗೆ ಬಹುಕಾಲ ನಿಲ್ಲಬಲ್ಲವು. ಆದರೆ, ನವ್ಯ ಕಾವ್ಯ ಕಾಗದದ ಮೇರೆ ಬರೆದಿಟ್ಟರೇನೆ ಕವಿಗೆ ಗೋಚರ.

ನಂತರ, ಸಾಮುಗ್ರಿ. ನವ್ಯಕಾವ್ಯಕ್ಕೆ ಎಲ್ಲವೂ ಸಾಮುಗ್ರಿ ಸಕಲ ಚರಾಚರಗಳೂ, ಕ್ರಿಮಿಗಳೂ, ಅಣುರೇಣು ತೃಣಕಾಷ್ಠಗಳೂ, ಅಖಿಲಾಂಡಕೋಟಿ ಬ್ರಹ್ಮಾಂಗಳೂ, ಛಪ್ಪನ್ನೈವತ್ತಾರು ದೇಶಗಳೂ, ಅತಲವಿತಲ ರಸಾತಲಗಳೂ, ಪೆಲಿಕನ್ ಮಿಲಿಕನ್‌ಗಳೂ, ಅವನಿಗೆ ಬೇಕು. ಹಣ್ಣು ಹೂವುಗಳ ಜೊತೆಗೆ ಅವನಿಗೆ ನಾರು ಬೇರುಗಳೂ ಬೇಕು. ಸಾಂಬ್ರಾಣಿಯ ಸಂಗಡ ಸಿಗರೇಟು, ಹಸುಗೂಸಿನೊಂದಿಗೆ ಹಸು, ಉಪನಿಷತ್ತಿನೊಂದಿಗೆ ಉಪ್ಪಿನಕಾಯಿ, ಶೀಲದ ಬೆನ್ನಲ್ಲೇ ಅಶ್ಲೀಲ—ಎಲ್ಲವೂ ಅವನ ಉಗ್ರಾಣದಲ್ಲಿರಬೇಕು. ಸುಲಿದ ಬಾಳೆಯ ಹಣ್ಣನ್ನು ಸಗಣಿಯಲ್ಲಿರಿಸಿ **"ಪಿಸುಕು"**ವುದೇ ನವ್ಯಕಾವ್ಯದ ಗುಟ್ಟು. ಪರಂಗಿಯವರೆಲ್ಲ ಹೀಗೆ ಮಾಡುತ್ತಿರಬೇಕಾದರೆ, ನಾವೇಕೆ ಹಿಂತೆಗೆಯಬೇಕು. ಒಂದು ಪಂಕ್ತಿ—ಭವ್ಯ, ಒಂದು ಪಂಕ್ತಿ ಅಸಹ್ಯ, ಒಂದು ಪಂಕ್ತಿಯ ಅರ್ಧ ವಿಜ್ಞಾನ ಮತ್ತೊಂದು ಅರ್ಧ ಅಜ್ಞಾನ, ಹೀಗೆ ವಾಚಕನನ್ನು ಹಾಲಲ್ಲದ್ದುವುದು, ಗಂಜಳದಲ್ಲದ್ದುವುದು, ಇದು ಸತತವಾಗಿ ನೂರುಸಲ ನೆರವೇರಿದರೆ, ಆಯಿತು, ಅವನ ಜನ್ಮ ಸಾರ್ಥಕ—ಒಂದು ಹೊಸಾಹೊಸ, ಯಾರೂ ಇದುವರೆಗೂ ಬರೆಯದ ಮಾದರಿ ಪದ್ಯ!

ಆದ್ದರಿಂದ, ಅವನು ಮೊದಲು, ಎರಡು ಗೋಡೆಗಳಲ್ಲಿ ಪಂಕ್ತಿ ತುಂಡುಗಳನ್ನು ಒರೆದಿರಿಸಿಕೊಳ್ಳಬೇಕು. ಒಂದರಲ್ಲಿ. ಉತ್ತಮ; ಒಂದರಲ್ಲಿ ಅಧಮ. ಅಲ್ಲ! ಉತ್ತಮ ಅಧಮ ಎಂಬ ವ್ಯತ್ಯಾಸವನ್ನೇ ಅವನು ಇಟ್ಟುಕೊಳ್ಳಕೂಡದು. ಒಂದರಲ್ಲೊಂದಿಷ್ಟು ಇನ್ನೊಂದರಲ್ಲೊಂದಿಷ್ಟು... ಹಿಂದಿನ ಕವಿಗಳಿಂದ, ಮಹಾ ಗ್ರಂಥಗಳಿಂದ, ಮಂತ್ರ ಗಳಿಂದ, ಪರದೇಶೀ ಕವಿಗಳಿಂದ, ಚರಿತ್ರೆಯಿಂದ, ಹಳೇ ಕ್ಯಾಟಲಾಗುಗಳಿಂದ, ರೈಲ್ವೆ ಟೈಂಟೇಬಿಲ್ಲುಗಳಿಂದ, ಎಲ್ಲಿಂದಬೇಕಾದರೂ, ಪಂಕ್ತಿಗಳನ್ನು ತುಂಡರಿಸಿ, ಗೋಡೆ ಗಳಲ್ಲಿರಿಸಿಕೊಳ್ಳಿ. ಗೋಡೆ ಭರ್ತಿ ಮುಖ್ಯ.

ಆಮೇಲೆ, ಕಣ್ಣು ಮುಚ್ಚಿಕೊಂಡು, ಒಂದೊಂದು ಗೋಡೆಯಿಂದಲೂ, ಒಂದೊಂದು ತುಂಡು ತೆಗೆದು, ಖಾಲಿ ಕಾಗದದ ಮೇಲೆ ಹೀಗೆ ಬರೆಯುತ್ತ ಹೋಗಿ.

ವಿರಹಿಗಳ ಶೃಂಗಾರ? ಬೆಂಡೋಲೆ, ನಾಯಿ ತನ ಬೇಡಿನ್ನು,
ಕಾಗೆ ಭಂಗಾರ; ಏಕಂ ಸತ್! ಪಾನ್ ಮುನ್ ಜಾನ್! ಕೇಶವಂ ಪ್ರತಿಗಚ್ಛತಿ!
ಅಣೋರಣೀಯಾನ್, ಧನಲಕ್ಷ್ಮಿ ಭೋಜನ ಮಾಡಿದಳು,
ಮಳೆ ಬಂದು ಕೆರೆ ತುಂಬಿತು!
ಮಲಾನ್‌ರವರ ನೀತಿ, ಹುಚ್ಚುಕೋತಿ, ಜಾತಿ ಜಾತಿಗೆ ವೈರ, ಕುಸ್ತಿ ಹೊಡೆದಾಟ.
ಹೃದಯಗರ್ಭದಾಳದಲ್ಲಿ ಕತ್ತೆ, ಕತ್ತೆ, ಕಿರಿಚುತಿದೆ; ಕುಹೂ, ಕುಹೂ!
ಸುಂದರಿ ಸಿಂದ್ರಿ, ಮಂಕುತಿಮ್ಮಾ, ಕಮ್ಮಟ, ಗುಮ್ಮಟ, ಮಟಮಟ ಮಧ್ಯಾ,
ಇಳಿದು ಬಾ, ಕುರುಡೆ! ಮರಿದುಂಬಿಯಾಗಿ, ಮುಗಾರ್ಗೂಳಿಯು
ಗುಟುರನು ಹಾಕುತ........
ಹೊಗೆ ಬಂತು, ಗಂಗೆ! ಪಾವನ ಕುರಂಗೆ! ತೇನ್‌ಸಿಂಗನ ಹಿಂದೆ ಹಿಲಾರಿ,
ಉದರ ವೈರಾಗ್ಯವಿದು, ಯಾಲ್ಟದಲಿ ಪಲ್ಟಿ ಹೊಡೆಯಿತು,

ಅರ್ಥ? ಎಂದು ಯಾರಾದರೂ ಕೇಳಿದರೆ, ಹೇಳಿ! "ಕವಿಯ ಕೆಲಸ ಕಟ್ಟು ವುದು; ಕವನ ಕಟ್ಟುವುದು....ಅದಕೆ ಅರ್ಥ ಕಟ್ಟುವವನು ಹುಟ್ಟಿ ಬರುತ್ತಾನೆ, ನಾಳೆ; ಕೊಟ್ಟು ಹೋಗುತ್ತಾರೆ ನೋಬಲ್ ಬಹುಮಾನವನ್ನ"........

ಆದರೆ, ಒಂದೇ ಒಂದು ಎಚ್ಚರಿಕೆಯ ಮಾತು. ಇಂಥ ಕವನಗಳನ್ನು ಹೆಚು ಬರಿಯಬೇಡಿ. ಒಂದು ಸಂಗ್ರಹಕ್ಕೆ ಆಗುವಷ್ಟು ಬರೆದನಂತರ, ಇನ್ನು ಯಾವ ನೌಕರೀನಾದರೂ ಕೈಹಚ್ಚಿ, ಏಕೆಂದರೆ, ಅದೇ ಹವ್ಯಾಸಕ್ಕೆ ಬಿದ್ದರೆ, ನಿಮ್ಮ ಮಾತೆಲ್ಲ ಅದೇ ರೀತಿಯಾಗಿ, ನಿಮ್ಮನ್ನ ದಿವಾನಾಸ್ಪತ್ರೆಗೆ ಸೇರಿಸಿಬಿಟ್ಟಾರು! ಇಲ್ಲ, ಪರಂಗಿ ಯವರು ಬಂದು ಎತ್ತಿಕೊಂಡು ಹೋಗಿಬಿಟ್ಟಾರು. ಜೋಕೆ.

—ವಿ. ಕಾಮತ್.

—— o ——

ಉದ್ದಾಮುವಿನ ಉಪಾಯ

ಆಫೀಸಿನಲ್ಲಿ ಎಂದಿನಹಾಗೆ "ಟಿಪ್, ಟಿಪ್" "ಕರ್, ಕರ್" ಶಬ್ದಗಳು ಸಾಂಗವಾಗೇನೋ ಸಾಗಿದ್ದವು. ಇದ್ದಕ್ಕಿದ್ದಂತೆ ಎಲ್ಲಾ ಶಬ್ದಾನು ನಿಂತು ಎಲ್ರೂ ಕನ್ನಡಕಗಳನ್ನು ಮೂಗಿನ ಮೇಲೆ ಸಿಕ್ಕಿಸಿ ಬಾಗಿಲ ಕಡೆ ದೃಷ್ಟಿ ಹರಿಸಿದೆವು ಉದ್ದಾಮು ಅದೇ ನಮ್ಮ ದೋಸ್ತು ಆಫೀಸಿನಲ್ಲೊಬ್ಬ ಗುಮಾಸ್ತ, ಸ್ವಲ್ಪ 'Decent fellow' ಅನ್ನಿ ಗರಿಮುರಿನ ಸೂಟು, ಪಾಲಿಷ್ ಹಾಕಿದ ಬೂಡ್ಸು, ಆದ್ರೆ ಮಾತ್ರ ಬಟ್ಟೆತಲೆಯೊಡನೆ ಆಗಮಿಸಿದ, ಎಲ್ಲರಿಗೂ ಆಶ್ಚರ್ಯ ಎಲಾ ಇವನ, ಒಂದಿವ್ಸಾನು ಹಜಾಮನಿಗೆ ತಲೆ ತಗ್ಗಿಸದವನು ಈ ದಿನ ನುಣ್ಣಗೆ ಬೋಳಿಸಿಕೊಂಡಿ ದ್ದಾನಲ್ಲಾಂತ ಎಲ್ಲರಿಗೂ ಸಮಸ್ಯೆ. ಗುಮಾಸ್ತೆಗಳಲ್ಲೀ ಗುಸು, ಗುಸು. ಪಿಸು, ಪಿಸುಗಳಿಗೆ ಶುರುವಾಯಿತು. ಉದ್ದಾಮು ಮಾತ್ರ ನೇರವಾಗಿ ಒಳಗೆ ಬಂದಿದ್ದೆ ತನ್ನ ಪೀಠದಲ್ಲಿ ಮಂಡಿಸಿ, ಕಡತಗಳಿಗೆ ಕೈ ಹಾಕಿದ.

ಇದೇ ಸಮಯಾಂತ ಟೈಪಿಸ್ಟ್ ತಂಗವೇಲು ವೃದ್ಧಗುಮಾಸ್ತೆ ಗೃದ್ರಪ್ಪನವರು, ನಾನು ಮತ್ತೆ ಆಫೀಸಿನಲ್ಲಿ ಉದ್ದಾಮುವನ್ನು ಬಿಟ್ಟು ಉಳಿದವರೆಲ್ರೂನೂವೆ ಒಂದು ಚಿಕ್ಕ ಸಭೆ ಸೇರಿದೆವು. ಗೃದ್ರಪ್ಪನವರೇ ಶುರುಮಾಡಿದರು. "ಅಯ್ಯಾ ಕ್ಲರ್ಕು ಗಳಾ, ಉದ್ದಾಮು ಹ್ಯಾಗೆ ಬರುತ್ತಿದ್ದ ಹಿಂದೆ. ಆಹಾ! ಗಡ್ಡ, ಮಿಸೆ ಬಿಟ್ಟು ಒಳ್ಳೇ ಮಾಣಿಗಳ ಹಾಗೆ ಜುಟ್ಟನ್ನು ಬಿಟ್ಟಿದ್ದನಲ್ರಯ್ಯಾ, ನೀವಿ, ನೀವಿ ಬಿಟ್ಟಿದ್ದ ಜುಟ್ಟನ್ನು ಹಾಳುಮಾಡಿದನಲ್ಲಾ ಮುಂಡೆ........ಡ, ಅಂತಾ ಪಂಚೆ ಕೊನೆಯಿಂದ ಕಣ್ಣನ್ನೊರಸಿಕೊಂಡರು. ಯಾತಕ್ಕೆ, ಯಾತಕ್ಕೇ, ಅಂತಾ ಎಲ್ರೂ ಯೋಚಿಸಿದೆವು. ಯಾರಿಗೂ ಹೊಳೀಲಿಲ್ಲ. ಪೋಲೀಸ್ ಖಾತೆಗೆ ಮಣ್ಣಾಕಿ ಬಂದಿದ್ದ ಗುಮಾಸ್ತೆ ಪಾಪಣ್ಣ 'ಹೇಗಾದ್ರೂ ಮಾಡಿ ಕಂಡ್ಹಿಡೀತೀನಿ ಈ ಕೇಸನಾ' ಅಂತ ಬೋಳಿಸಿದ ಮಿಸೆ ಮೇಲೆ ಕೈಯಿಟ್ಟ.

ಪಾಪಣ್ಣ ಉದ್ದಾಮು ಯಾಕೆ ಜುಟ್ಟನ್ನ ಬೋಳಿಸ್ದ ಎನ್ನುವದನ್ನು ಕಂಡು ಹಿಡೀಬೇಕೆಂತಲೂ, ಇಲ್ಲದಿದ್ದರೆ ಸಭೆಯವರೆಲ್ಲಾ ಸೇರಿ ಉದ್ದಾಮುವನ್ನೇ ಕೇಳುವು ದೆಂತಲೂ ಠರಾವಾಗಿ ಸಭೆ ಭರಖಾಸ್ತಾಯ್ತು.

ಮೂರನೇ ದಿನ ಪಾಪಣ್ಣ 'ಆಫೀಸಿಗೆ ಬಂದಾಗ' "ಉದ್ದಾಮು ಹಿಂದೇನೇ ಎರಡು ಮೂರು ದಿನ್ಸ ವೇಷ ಮರಸ್ಕೊಂಡು ಓಡಾಡ್ದೆ ಸಾರ್, ಏನೂ ಪತ್ತೆ ಆಗ್ಲಿಲ್ಲ" ಅಂತ ರಿಪೋರ್ಟ್ ಮಾಡಿದ.

ಸರಿ, ಆ ದಿನ ಟೀ ಟೈಂನಲ್ಲಿ ಸಭೆ ಸೇರಿ ಉದ್ದಾಮುವನ್ನೇ ಕೇಳುವುದೆಂದೂ ಗೊತ್ತಾಯಿತು. ಟೀ ಟೈಂ ಬಂತು. ಲೇಖನಿಗಳನ್ನೆಲ್ಲಾ ಕಿತ್ತೊಗೆದು ಮೂಗಿನ ಮೇಲಿದ್ದ ಕನ್ನಡಕವನ್ನ ಜೇಬಿಗಿಳಿಸಿ, ಟೋಪಿ ತಲೆಗೇರಿಸಿ, ಕುರ್ಚಿಗೆ ನೇತಾಕಿದ್ದ ಕೋಟನ್ನ ಹೆಗಲಿಗೆ ತಗುಲಿಸ್ಕೊಂಡು ಜವಾನರಾದಿಯಾಗಿ ಹೊರಟೆವು. ಮೊದಲೇ ಗೊತ್ತುಮಾಡಿದ್ದ ರೀತಿ ಕಾಫಿ ಲೋಟಗಳನ್ನು ಕೈಯಲ್ಲಿ ಹಿಡಿದು ಸಭೆ ಸೇರಿದೆವು. ನಾನೇ ಎದ್ದು ನಿಂತು ಉದ್ದಾಮುವನ್ನು ಕುರಿತು "ತಾವು ದಯವಿಟ್ಟು ತಮ್ಮ ಜುಟ್ಟನ್ನು ಬೋಳಿಸಿದ ವಿಚಾರವನ್ನು ಕುತೂಹಲೀಕೃತಚಿತ್ತರಾಗಿರುವ ಗುಮಾಸ್ತರು, ಅಲ್ಲಾ, ಸಭಿಕರಿಗೆ ಶೃತಪಡಿಸಬೇಕು" ಎಂದು ವೈಯ್ಯಾಕರಣಿಯ ತರಹ ಮಾತಾಡಿ ಕುಳಿತುಕೊಂಡೆ.

ಉದ್ದಾಮು ಬೀಡಿ ಸೇದುತ್ತಿದ್ದವನು ಒಂದು "ಧಂ" ಜೋರಾಗಿ ಎಳೆದು ಬೀಡಿಯನ್ನೆಸೆದು ಧಾರಾಳವಾಗಿ ಬಾಯಿ ಮೂಗುಗಳಿಂದ ಧೂಮವನ್ನು ಬಿಟ್ಟು ಎದ್ದುನಿಂತು, ಸಭಿಕರನ್ನು ನೋಡಿ ಒಂದು ಸಲ ಕೆಮ್ಮಿ ಕ್ಯಾಕರಿಸಿ ಶುರುಮಾಡಿದ. "ನಾನು ಜುಟ್ಟನ್ನು ಉದ್ದವಾಗಿ ಬೆಳಸಿದ್ದಕ್ಕೂ ಮತ್ತೆ ಬೋಳಿಸಿದ್ದಕ್ಕೂ ಎರಡು ಕಾರಣಗಳಿವೆ. ಮೊದಲನೆಯದಾಗಿ ಹಿಂದೆ ನಿಮ್ಮ ಹಾಗೇ ನಾನು ತಿಂಗಳಿಗೆ ಒಂದಾವರ್ತಿ ಕ್ರಾಫ್‌ಕಟ್ ವಾರಕ್ಕೆ ೩ ದಿನ ಮುಖಕ್ಷೌರ ಮಾಡಿಕೊಂಡು ಸಂಬಳ ದಲ್ಲಿ ೩ ರೂ.ನ ಕೇಶಧ್ವಂಸನಕಾರ್ಯಕ್ಕೆ ನಿವೇದಿಸಿದ್ದೆ. ಆದರೆ ಮೂರು ತಿಂಗಳ ಹಿಂದೆ ಮುರುಗವೇಲು ಸೆಲೂನಿಗೆ ಹೋಗಿದ್ದೆ, ಆಗ ಮುರುಗವೇಲೂನೆ ಬಂದು ಹಲ್ಲುಕಿರಿದು ಸ್ವಾಗತಿಸಿ, ನನ್ನ ಕುರ್ಚಿಯ ಮೇಲೆ ಕೂಡಿಸಿ, ದುಪಟಿಯನ್ನು ಹೊದಿಸಿ ಕತ್ರಿಯನ್ನು ಕೂದಲಮೇಲೆ ಆಡಿಸಿದ. ನಾನು ಅವನ ಮುಖವನ್ನು ನೋಡಿದಾಗ ಏನೋ ಕೇಳಬೇಕೆಂತ ಅನ್ನಸ್ತು. ಸರಿ ಕೇಳಿದೆ "ಅಲ್ಲಾ ಮುರುಗವೇಲು ನಿನಗೆ ಬೋಳಿಸ್ಕೊಳೋಕೆ ದುಡ್ಬೇಡ, ಖರ್ಚಿಲ್ಲ. ಅಂಥಾದರಲ್ಲಿ ಈ ಪಾಟಿ ಯಾಕೆ ಕೇಶರಾಶಿಯನ್ನು ಬೆಳಸಿದ್ದೀಯಾ" ಅಂತಾ ಕೇಳ್ದೆ. ಅವ ಅಂದ, "ಅದೆಲ್ಲಾ ಒಂದು ಗುಟ್ಟು ಸ್ವಾಮಿ ಅಂತಾ." ಅವನಿಗೆ ೮ ಆಣೆ ಇನಾಮು ಮಡಗಿದ ಮೇಲೆ ಬಾಯ್ಬಿಟ್ಟ.

"ಏನೂ ಅಂತ" ಎಂದು ನಾವೆಲ್ಲಾ ಒಂದೇ ದನಿಯಲ್ಲಿ ಅರಚಿದೆವು. "ಅದೇ ಹೇಳ್ತೀನಿ ಇರಿ" ಅಂತ ಕೈಯಲಿದ್ದ ಗ್ಲಾಸಿನಿಂದ ಒಂದು ಗುಟುಕು ಕಾಫಿ ಹೀರಿ ಮುಂದುಸುರಿಸಿದ. "ನೋಡಿ, ಮುರುಗವೇಲು ಹೇಳಿದ. "ನಾಟ್ಕದ ಕಂಪನಿಯ

ವರು ಇದ್ದಾರಲ್ಲ ಅವರ್ಗೆ ನಾಟ್ಕ ಆಡೋದಕ್ಕೆ ಟೋರ್ಫ಼ ಬೇಕಾಗುತ್ತಂತೆ, ಆದ್ದರಿಂದ ಯಾರು ಉದ್ದಾನೇ ಕೂದಲು ಬಿಟ್ಟಿರ್ತಾರೋ ಅವರ ಕ್ರಾಪ್‌ನ ತಾವೇ ಬೋಳ್ಸಿ ಅವರ ಗಡ್ಡ ಮಿಾಸೇನ ಕಿತ್ತು,,ಅದಕ್ಕೋಸ್ಕರ ದುಡ್ಡೀಸ್ಕೊಳ್ಳೋ ಬದ್ಲು, ೩ ರೂ. ಅಥ್ವಾ ೪ ರೂಪಾಯಿಗೆ ಕೊಡ್ತಾರಂತೆ, ನಾಟ್ಕಗಳ ಹಾವಳಿ ಹೆಚ್ಚಾದಾಗ, ಟೋರ್ಫ಼ ಗಳ (Scarcity) ಹೆಚ್ಚಾಗುತ್ತೆ. ಆಗ ಕೂದಲಿನ ಬೆಲೆ ೩ ರೂ. ಇದ್ದದ್ದು, ೭ ರೂ. ೮ ರೂ.ವರೆಗೂ ಹೆಚ್ಚುತ್ತಂತೆ. ಮುರುಗವೇಲು ಅದಕ್ಕೋಸ್ಕರಾನೆ, ಆ ತರಹ ಕೂದಲನ್ನ ಬಿಟ್ಟಿರೋದು. ಕೇಳಿದ ಮೇಲೆ ನಾನು ಕೂಡ ಗಡ್ಡ, ಮಿಾಸೆ, ಮಾಣಿ ಕ್ರಾಪು ಎಲ್ಲಾ ಬಿಟ್ಟಿದ್ದೆ. ಯಾವುದೋ ನಾಟ್ಕದವನು ಈ ದಿನ ಬೆಳಗಿನ ಜಾವಾ ಬಂದು ಆರು ರೂ.ಗೆ ಬೆಲೆ ಮಾಡಿ ಬೋಳಿಸ್ಕೊಂಡು ತೆಗೊಂಡುಹೋದ. ಅವಳೂ ಮನೇಲಿ ಅಕ್ಕೀ ಇಲ್ಲಾ ಅಂತ ಅಂದ್ಲು. ಅದಕ್ಕೆ ೬ ಸೇರು ಅಕ್ಕಿ ತಂದೆ ಆ ದುಡ್ಗೆ "ಅಂತ ಹೇಳಿ ಉಳಿದಿದ್ದ ಕಾಫೀನ ಗುಟಕರಿಸಿ ಗ್ಲಾಸನ್ನ ಕೆಳಗಿಟ್ಟ ಉದ್ದಾಮು. ಸಭೆಯಲ್ಲಿದ್ದ ಆಡೀಟರ್ ಆರ್ಮುಗಂ ಎದ್ದು ನಿಂತು, "ಸ್ವಾಮಿ, ವರ್ಷಕ್ಕೆ ಎಷ್ಟು ಸಲ ಫಸಲು ಅಲ್ಲಾ ಎಷ್ಟು ಸಲ ಕಟಾವು ಮಾಡಬಹುದು" ಎಂದು ಕೇಳಿದ.

"ವರ್ಷಕ್ಕೆ ೪ ಸಲಕ್ಕೆ ಮೋಸವಿಲ್ಲಾ ಸ್ವಾಮಿ. ೧೬ ರೂಪಾಯಿ ಗ್ಯಾರಂಟಿ" ಅಂತಾ ಉದ್ದಾಮು ಭರವಸೆ ಕೊಟ್ಟ.

ನಾನೇ ಎದ್ದು ಮುನಿಸ್ವಾಮಿ ತಂದಿದ್ದ ಖರ್ಚಿಹಾರವನ್ನು ಉದ್ದಾಮು ಚಾಚಿದ ಕೊರಳಿಗೆ ಹಾಕಿದೆ. ಸಭಿಕರು ಚಪ್ಪಾಳೆ ಬಡಿದರು. ನಂತರ ಆಫೀಸ್ ಬಾಯ್ ಅಲ್ಲಾ ಉದ್ದೀನ ತನ್ನ ಕಠೋರ ಕಂಠದಿಂದ ರಾಷ್ಟ್ರಗೀತೆಯನ್ನು ಅರಚಿದ, ನಂತರ ಸಭೆ ಮುಕ್ತಾಯವಾಯಿತು.

ಈಗ ನಮ್ಮ ಆಫೀಸಿನಲ್ಲಿ ಜವಾನ ಜಾನಯ್ಯನಿಂದ ಹಿಡಿದು ಹೆಡ್ ಗುಮಾಸ್ತೆ ಹಯವದನರಾಯರ ವರೆಗೂ ಎಲ್ಲರೂನೂವೆ ಕೇಶರಾಶಿಯನ್ನು ಬೆಳಸಿದ್ದೇವೆ. ಹಯವದನರಾಯರಂತೂ ಕಟಾವಿನ ದಿನಗಳನ್ನೇ ಎಣಿಸುತ್ತಿದ್ದಾರೆ.

—ಕೆ. ಎನ್. ಕಿಟ್ಟಿನ್.

—O—

ಶ್ರೀರಾಮನ ಕೃಪೆ

ನಮ್ಮೂರು ರಾಮ ಮಂದಿರದ ಜೀರ್ಣೋದ್ಧಾರ ಕೆಲಸ ಬಹಳ ವರ್ಷಗಳಿಂದ ಬಾಕಿ ನಿಂತಿತ್ತು. ಸೂರು ಸೋರುತ್ತಿದ್ದರೂ, ಕಂಬಗಳು ಓರೆಯಾಗಿದ್ದರೂ, ಇಸ್ಪೀಟು ಆಡುವ ಚಟ ಇದ್ದ ನಮ್ಮೂರು ಸಾಹುಕಾರರ ಮಕ್ಕಳು ಅಲ್ಲೇ ಹೇಗೋ ತಮ್ಮ ಕಾಲವನ್ನು ಹರಣಮಾಡುತ್ತಿದ್ದರು. ಆದರೆ, ಹೋದ ದಸರಾ ಟೈಂನಲ್ಲಿ, ಅದಕ್ಕೂ ಬಂತು........ಶುಕ್ರದೆಶೆ.

ಬೆಂಗಳೂರಿಂದ ಭಾರಿ ಕೀರ್ತನಕಾರರೊಬ್ಬನ್ನು ಕರೆಯಿಸಿ, "ಶ್ರೀರಾಮ ಜನನ" ಎಂಬ ಹರಿಕಥೆಯನ್ನು ಬೆನಿಫಿಟ್ ಇಡಿಸಿ, ಅಮೀಲ್ದಾರ್ ಅಧ್ಯಕ್ಷತೆಯಲ್ಲಿ ಕಾರ್ಯ ನಡೆಸಿದರೆ, ಅವರಿಗೆ 25 ಕೊಟ್ಟು, ಉಳಿಯುವ 150ಕ್ಕೆ, ಸುಲಭದಲ್ಲೇ ರಿಪೇರಿ ಪೂರ್ತಿಮಾಡಬಹುದೆಂದು ಕಾಂಗ್ರೆಸ್ ಲೀಡರ್ ಪುಟ್ಟಸಣ್ಣಪ್ಪನವರು ನಿಶ್ಚಯಿಸಿದರು.

ಅಮೀಲ್ದಾರ್ ಬಂದರು; ಕಥೆ ನಡೆಯಿತು. ತಟ್ಟೆ ತೋರಿಸುವುದರೊಳಗೆ ಮುಕ್ಕಾಲು ಜನ ಪರಾರಿ, ಮಕ್ಕಳೆಲ್ಲ ನಿದ್ರೆ; ಹೆಂಗಸರೆಲ್ಲ ಹರಟೆಯ ಗಲಾಟೆ. ದಾಸರಿಗೇ ಕೊಡಲೇಬೇಕಾದ 25ಕ್ಕೇನೇ ಬಂತು ವಿಪತ್ತು. ಅಮೀಲ್ದಾರ್ ಕೂಡ ಬರೀ ಕೈ ತೋರಿಸಿ ಬಚಾವಾದರು.

ಆಗ, ಸದ್ಯಕ್ಕೆ, ನಮ್ಮೂರಿನ ರಸಿಕ ಕಲಾಮಂಡಲಿಯವರು "ನಾವೊಂದು ನಾಟಕ ಆಡುತ್ತೇವೆ, ಬೆನಿಫಿಟ್" ಅಂದರು. ಖರ್ಚಿಗೆ 50 ಅಡ್ವಾನ್ಸಾಗಿ ಹೆಡ್ಮೇಷ್ಟ್ರು ಕೊಟ್ಟರು, ಸ್ಕೂಲಿನ ಸ್ಪೋರ್ಟ್ಸ್ ಫಂಡಿನಿಂದ, ಗುಟ್ಟಾಗಿ. ಐವತ್ತನ್ನೂ ತಿಂದು ಹಾಕಿದರು. ಟಿಕೀಟುಗಳನ್ನು ಸಾಲವಾಗಿಯೇ ಮಾರಬೇಕಾಯಿತು. ನಾಟಕದ ದಿನ ಅಲ್ಲೇ ಬಂದು ಕೊಡುತ್ತೇವೆ, ಅಂದರು; ಇಂಥ ಕೆಲಸಕ್ಕೆ ಸಹಾಯ ಮಾಡದೆ ಇರುತ್ತೇವೇನಯ್ಯಾ, ಅಂದರು. ದಾಸರಿಗೆ 25 ಕೊಡದೆ ಇದ್ದರೆ, ನಮ್ಮ ಊರಿಗೇ ಅವಮಾನ, ಅಂದರು.


ನಾಟಕದ ದಿನ ಸುಮಾರು 300 ರೂಪಾಯಿನ ಜನ ಇದ್ದರು. ಆದರೆ, ಅವರು ನಾಟಕ ನೋಡುವುದಕ್ಕೆ ಬಂದವರಲ್ಲ. ರಸಿಕ ಕಲಾಮಂಡಲಿಯ ಸೆಕ್ರೆಟರಿಯ ಎದುರು ಪಾರ್ಟಿಯವರು........ಪಿ. ಎಸ್. ಸಿ. ಪಕ್ಷದವರು. ನಾಟಕ ನಡೆಯಗೊಡಿಸಬಾರದು, ಎಂಬ ಅಭಿಪ್ರಾಯದವರು. ಉದ್ದಕ್ಕೂ ಕಲ್ಲು, ಮಣ್ಣು, ಸಗಣಿ. ದೀಪ ಎಂಟು ಬಾರಿ ಅರಿಹೋಯ್ತು. ಪಿ. ಎಸ್. ಸಿ. ಹುಡುಗ ಒಬ್ಬ ಪಾತ್ರದಾರರ

ಪೆಯಿಂಟ್ ಬಣ್ಣಕ್ಕೆ ಅದೇನನ್ನೋ ಗುಟ್ಟಾಗಿ ಬೆರೆಸಿಬಿಟ್ಟಿದ್ದ. ಅದನ್ನು ಬಳಿದು ಕೊಂಡ ಹುಡುಗರಿಗೆ ಮುಖವೆಲ್ಲ ಬೊಬ್ಬೆ!

ಮೂರು ಕಾಸು ವಸೂಲಾಗಲಿಲ್ಲ 60 ರೂಪಾಯಿ ಖರ್ಚು! 6 ಹುಡುಗರ ಮುಖಗಳು ಹಾಳು. ಹೆಡ್ಮೇಷ್ಟರು ಲಬೋ ಲಬೋ ಅಂತ ನಡುಬೀದಿಯಲ್ಲೇ ಹೊಡೆದುಕೊಂಡರು. ಅವರಿಗೆ ಡಿಸ್ಮಿಸ್ ಆರ್ಡರ್ ಬಂತು, ಮೇಲಿಂದ.

ಅವರಿಗೊಂದು ಬೆನಿಫಿಟ್ ಷೋ ಕೊಡುತ್ತೇವೆ, ವ್ಯಾಯಾಮ ಪ್ರದರ್ಶನ, ಎಂದರು, ಪಿ. ಎಸ್. ಸಿ. ಯವರು. ದಾಸರದು ಬಾಕಿ, ಹುಡುಗರ ಮುಖಕ್ಕೆ ಮುಲಾಮು ಬಿಲ್, ರಸಿಕ ಕಲಾ ಮಂಡಲಿಗಾದ ನಷ್ಟ, ಸ್ಕೂಲ್ ಫಂಡ್ ಹಣ, ಹೆಡ್ಮೇಷ್ಟರನ್ನು ಮತ್ತೆ ಅದೇ ಜಾಗದಲ್ಲಿ ಕೂರಿಸುವಂತೆ ಮಂತ್ರಿಗಳಿಂದ ಆರ್ಡರ್ ಬರೆಯಿಸಿ ತರುತ್ತೇನೆ ಎಂದು ಭರವಸೆ ಕೊಟ್ಟ ಆಸಾಮಿಯನ್ನು ಅಲ್ಲಿಯತನಕ ಕಳುಹಿಸಲು ತಗಲುವ ಖರ್ಚು, ಇವಿಷ್ಟಕ್ಕೂ ಟಿಕೇಟು ಅಚ್ಚುಮಾಡಿಸಿ, ಸಂತೆಗೆ ತೆಗೆದುಕೊಂಡು ಹೋದೆವು. ಆದರೆ, ಅವತ್ತು ಬಂತು ಆರ್ಡರು. ಕಾಲರಾ ನಿಮಿತ್ತ, ಮೂರು ತಿಂಗಳು ನಮ್ಮೂರಲ್ಲಿ ಸಂತೆ, ಸಾರ್ವಜನಿಕ ಪ್ರದರ್ಶನಗಳು ಇತ್ಯಾದಿ ರದ್ದು ಅಂತ. ಪುಣ್ಯಕ್ಕೆ ಈ ಕಾಲರಾ ಭೀತಿಯಿಂದ, ದಾಸರು ಊರಿಗೆ ಬಂದು ತಗಾದೆ ಮಾಡುವ ಹಾಗಿಲ್ಲ; ರಸಿಕ ಕಲಾ ಮಂಡಲಿಯವರು ತಿಂಡಿ ತಿಂದಿದ್ದ ಹೋಟಲೂ ಬಂದ್; ಹೆಡ್ಮೇಷ್ಟರಿಗೆ ನಿನ್ನೆಯಿಂದ ವಾಂತಿ ಭೇದಿ.

—ರೇವಣ್ಣ.



ಕೈನೋಡಿದರಲ್ಲಾ. ಡಾಕ್ಟರೇ ಈಗ ಹೇಗಿದೆ? ಜೀವರೇಖೆ ಚನ್ನಾಗಿದೆ.
ನಾನೇ ಔಷದಿ ಕೊಟ್ಟರೂ ಬದುಕ್ಕೋತೀಪ್ಪಾ !!

ಯಾತ್ರಿಕರ ಪತ್ರ

(೬)

ನಾವು ನಮ್ಮ ಮನೆಗಳನ್ನು ಬಿಟ್ಟು ಬಹಳ ದಿನಗಳಾದವು. ನಮ್ಮವರ ಸಮಾಚಾರ ತಿಳಿದಿಲ್ಲ. ನಾನು, ರಾಜ, ಚಂದಿ, ಬಹಳ ಸಮಾಲೋಚನೆ ನಡೆಸಿ—ಚೀಟಿ ಎತ್ತಿದೆವು. ರಾಜನ ಹೆಸರು ಬರಲಾಗಿ, ಅವನನ್ನು ಬೆಂಗಳೂರಿಗೆ ಅಟ್ಟಿದೆವು—ನಮ್ಮ ಮನೆಗಳಿಗೆ ಹೋಗಿ—ಸಮಾಚಾರ ತರಲಿಕ್ಕೆ. ರಾಜನಿಗೂ ಮನೆಯ ಹಂಬಲು ಜಾಸ್ತಿ. ವಾರಕ್ಕೊಮ್ಮೆ ಎಣ್ಣೆ-ನೀರು ಹಾಕಿಕೊಳ್ಳುವ ವಾಡಿಕೆ. ಸಂತೋಷದಿಂದ ತನ್ನ ಸೈಕಲ್‌ಲನ್ನು ನಮ್ಮಲ್ಲಿ ಬಿಟ್ಟು ಮೂರೇದಿನದಲ್ಲಿ ವಾಪಸ್ ಬರ್ತೀನಿ ಅಂತ ಹೇಳಿ ಹೊರಟ. ನಾನು ಚಂದಿ ನಮ್ಮ ಸಮಾಚಾರವನ್ನು ನಮ್ಮ ಮನೆಗಳಲ್ಲಿ ತಿಳಿಸುವ ರೀತಿಯನ್ನು ಎರಡು ಘಂಟೆಗಳ ಕಾಲ ಉರುಹಚ್ಚಿಸಿ, ಮುಂದೆ ನಮ್ಮನ್ನು ಭೇಟಿ ಮಾಡುವ ಸ್ಥಳವನ್ನು ಹೇಳಿ ರಾಜನನ್ನು ಕಳುಹಿಸಿಕೊಟ್ಟೆವು. ರಾಜ ಹೊರಟ ಮೇಲೇನೇ ನಮ್ಮ ಮುಂದಿನ ಕಷ್ಟ ನಮಗೆ ಗೋಚರವಾದದ್ದು! ನಾವಿಬ್ಬರು ಮೂರು ವಾಹನಗಳನ್ನು ಹೇಗೆ ರವಾನಿಸೋದು?—ಅಂತ!

"ರಾಜನೇ ತಕೊಂಡ್ಹೋಗಿ ತರಬೋದಿತ್ತು" ಅಂದ ಚಂದಿ. ಚಂದಿ ವಕೀಲನಾಗಿದ್ದರೆ ಚೆನ್ನಾಗಿರುತ್ತಿತ್ತು. ಅವನ ಕಕ್ಷಿಗಾರನನ್ನು ಗಲ್ಲಿಗೇರಿಸಿದಮೇಲೆ ಅವನನ್ನು ಉಳಿಸೋಕೆ ಒಂದು ವಳ್ಳೆ Point ಕಂಡುಹಿಡೀತಿದ್ದ!

"ಈಗೇನ್ಮಾಡೋನ್ಹೇಳೋ" ಅಂದೆ. ಅದಕ್ಕೆ "ನೀನೆರಡುತಕೋ, ಒಂದು ಸೈಕಲ್‌ಸವಾರಿ ಮಾಡು. ಇನ್ನೊಂದನ್ನು ಪಕ್ಕದಲ್ಲಿ Lead ಮಾಡು" ಅಂತ ಹೇಳಿ ಚಂದಿ ತನ್ನ ಸೈಕಲ್ಲನ್ನು ಸರಿಪಡಿಸಿಕೊಂಡ. ನಂಗೇನೂ ತೋಚದೆ ಚಂದೀನ ಒಂದು ಬಾರಿ ದುರಗುಟ್ಟಿ ನೋಡಿದೆ. ಆಗಂದ—"ಮೊದಲು ರಾಜನ ಸೈಕಲ್ಲನ್ನು ನನ್ನ ಕೈಲಿ ಕೊಡು. ನಾನು Ready ಯಾಗಿ ಹಿಡಿದುಕೊಳ್ತೀನೆ. ನೀನು ನಿನ್ನ ಸೈಕಲ್ಲನ್ನು ಹತ್ತಿ ನನ್ನ ಪಕ್ಕಕ್ಕೆ ಬಾ-ನಿಧಾನವಾಗಿ. ರಾಜನ ಸೈಕಲ್ಲನ್ನು ನಿನ್ನ ಬಲಗೈಗೆ ಕೊಡುತ್ತೇನೆ. ಸುಲಭವಾಗಿ Lead ಮಾಡಬಹುದು ಅಂತ"

ಹೌದು-ಸುಲಭ. ಬರವಣಿಗೆಯಲ್ಲಿ!

"ನಮ್ಮನೆ ಎದುರು ಸೈಕಲ್‌ಷಾಪ್ ಖಾದರ್ ಮಾಡ್ತಾನೆ. ಅತೀ ಸುಲಭ" ಅಂತ ಸೇರಿಸಿದ.

ನಾನು ಮೇಲೆ ವಿವರಿಸಿದ ರೀತಿಯಲ್ಲಿ ಚಾಚೂತಪ್ಪದೆ ಮಾಡಿದೆ. ಆದರೆ ನಾನು ಖಾದರ್ ಅಲ್ಲ. ರಸ್ತೆಯಲ್ಲಿ ಒಂದು ರಾಶಿಯಾಗಿ ಬಿದ್ದೆವು. ರಸ್ತೆಮೇಲೆ ಚಂದೀ ಸೈಕಲ್. ಚಂದೀ ಸೈಕಲ್ ಮೇಲೆ ಚಂದಿ. ಚಂದೀ ಮೇಲೆ ನಾನು. ನನ್ನ ಮೇಲೆ ನನ್ನ ಸೈಕಲ್—ಹೀಗೆ ಸಾಲಾಗಿ ಕೆಳಗಿಂದ ಮೇಲಕ್ಕೆ ಬಿದ್ದಿದ್ದೆವು. ಕಾಲುಘಂಟೆ ಕಾಲ ನನ್ನ ಚಂದಿಯ ಬೈದಾಟ, ಸೈಕಲ್ ಚಕ್ರ ಮತ್ತು ಕಬ್ಬಿಣದ ತಿಕ್ಕಾಟದಲ್ಲಿ ನಾವು ಪ್ರಪಂಚ ಮರೆತಿದ್ದೆವು. ನಾವೇನಾದರೂ ಹರಿಶ್ಚಂದ್ರನ ಆಸ್ಥಾನ ದಲ್ಲಿ, ವಿಶ್ವಾಮಿತ್ರರು ಬಂದು ಅವರ ಯಜ್ಞಕ್ಕೆ ಹಣ ಕೇಳುತ್ತಿದ್ದಾಗ, ಅವರ ಮುಂದೆ ಈ ರೀತಿ ಬಿದ್ದಿದ್ದರೆ, ಅವರು ಆನೆಯನ್ನೂ, ಗಜ್ಜಿಕಾಯನ್ನು ತರಿಸಬೇಕಾಗಿ ರಲಿಲ್ಲ! ನಾವೇ ಸ್ವತಂತ್ರ ಭಾರತದಿಂದ ಅಂತರಿಕ್ಷದವರಿಗೆ ಆವರಿಸಿದ್ದೆವು.

ಕಾಲು ಘಂಟೆಯಾದ ಮೇಲೆ ನಮ್ಮಿಬ್ಬರನ್ನು ಬಿಟ್ಟು ನಮ್ಮ ಸುತ್ತ, ಬೇರೆ ಜನರಿರುವುದು ತಿಳಿಯಿತು. ಅವರಲ್ಲಿ ನಮ್ಮ ವಗಟನ್ನು ಬಿಡಿಸುವ ಬಗ್ಗೆ ಪೂರಾ ವಾಗ್ಯುದ್ಧ ನಡೆಯಿತು. ಎಲ್ಲರ ಕೈವಾಡವೂ ಸೇರಿತು. ಮೊದಲು ಮನುಷ್ಯನ್ಯಾರು, ಸೈಕಲ್‌ಯಾವುದು ಅಂತ ಚರ್ಚೆಯಾಯಿತು. ಆಮೇಲೆ ಮನುಷ್ಯರಲ್ಲಿ ಜೀವಿ ಯಾರು ಅಜೀವಿ ಯಾರು ಅಂತ ಚರ್ಚೆಯಾಯಿತು. ನಂತರ ಸೈಕಲ್‌ಗಳಲ್ಲಿ ಸ್ವಂತ ಯಾವುದು, ಕಳವು ಮಾಲು ಯಾವುದು ಅಂತ ಚರ್ಚೆಯಾಯಿತು. ಕಡೆಗೆ ಒಟ್ಟಿಗೇ, ಸುಮಾರು ಅರವತ್ತು ಜೊತೆ ಕೈಗಳೂ, ಕಾಲುಗಳೂ ನಮ್ಮ ಮೇಲೆ ಧಾಳಿ ನಡೆಸಿ, ನಮ್ಮನ್ನೂ ನಮ್ಮ ವಾಹನಗಳನ್ನೂ ಬಿಡಿಸಿ, ನಮ್ಮಲ್ಲಿ ಉಳಿದಿದ್ದ ಅಂಗಗಳನ್ನು ಒಟ್ಟುಗೂಡಿಸಿ ಈಚೆಗೆ ಎಳೆದುಹಾಕಿದರು. ನಾನೂ ಚಂದಿ ಸ್ನೇಹಿತರು, ವಾಹನ ಗಳೂ ನಮ್ಮವು ಅಂತ ತಿಳಿದಮೇಲೆ ಅವರಿಗೆ ನಮ್ಮಮೇಲಿದ್ದ ಮಮತೆ, ಗೌರವ, ಆತುರಗಳೂ ಮಾಯವಾದುವು. ರೇಗಿತು-ಬದಲಾಗಿ. ಒಬ್ಬರನ್ನೊಬ್ಬರು ಬೈದಾಡಿ, ಗುದ್ದಾಡಿ ಬಂದ ದಾರಿ ಹಿಡಿದರು.

ಕಡೆಯಲ್ಲಿ ನಮ್ಮ ಹತ್ತಿರ ಒಬ್ಬ ವ್ಯಕ್ತಿ ಮಾತ್ರ ನಿಂತಿದ್ದರು. ವಯಸ್ಸು ಸುಮಾರು ಐವತ್ತು. ಹರುಕು ರುಮಾಲು. ತಥಾ ಜೊತೆಗೆ ಮಾಸಿದ ಕೋಟು. ಮೊಣಕಾಲು ಮೇಲೆ ಕಚ್ಚೆ ಪಂಚೆ-ಮೇಲುಕೋಟೆ ಅಂಚಿಂದು. ಮುಖದಲ್ಲಿ ಅಡ್ಡ ಗಂಧ—ಅಕ್ಷತೆ. ಒಂದು ವಾರದ ದೀಕ್ಷೆ. ನನಗೂ ಚಂದಿಗೂ ಥಟ್ಟನೆ ಹೊಳೆ ಯಿತು—ಆ ವ್ಯಕ್ತಿ ಯಾರಿರಬಹುದೆಂದು. ಚಂದೀಗೆ ಮುಚ್ಚುಮರೆಯಿಲ್ಲ.

"ಓಹೋ ಬನ್ನಿ ಮೇಷ್ಟ್ರೇ—ಪ್ರಜಾಮತ-ದೀಪಾವಳಿ ಸಂಚಿಕೇಲಿ ನಿಮ್ಮ ಫೋಟೋ ಬಂದಿದೆ—ನೋಡಿದೆ" ಅಂದ.

ನಾನು ನಾಲಿಗೆ ಕಚ್ಚಿಕೊಂಡೆ. ಚಂದಿ ದೂರದಲ್ಲಿದ್ದ. ಅವರು "ನಾನು ಬಡಕನಹಳ್ಳಿ ಪ್ರೈಮರೀ ಸ್ಕೂಲು ಉಪಾಧ್ಯಾಯ. ಲಕ್ಷ್ಮೀನರಸಿಂಹಶಾಸ್ತ್ರಿ. ತಾವು-ಯಾವೂರೋ?" ಅಂದರು.

ನಾನು "ನಾವು ಬೆಂಗಳೂರು. ನಾವು ಮೂವರು ಸ್ನೇಹಿತರು ಹೊರಟಿದ್ದೇವೆ. ಇವತ್ತು ನಮ್ಮ ಇನ್ನೊಬ್ಬ ಸ್ನೇಹಿತರು ಊರಿಗೆ ಹೋಗಿದ್ದಾರೆ. ಇನ್ನೆರಡು ದಿನಗಳಲ್ಲಿ ಹಿಂತಿರುಗುತ್ತಾರೆ" ಅಂದೆ.

ಲಕ್ಷ್ಮೀನೃಸಿಂಹಶಾಸ್ತ್ರಿಗಳು "ಸರಿ-ಬನ್ನಿ ಹಾಗಾದರೆ. ನಮ್ಮ ಹಳ್ಳಿಯಲ್ಲುಳಿಯಿರಿ-ಅವರು ಬರುವತನಕ." ಅಂತ ಹೇಳಿ-ತಾವೇ ಒಂದು ಸೈಕಲ್ಲನ್ನು ಬಹಳ ನಾಜೂಕಾಗಿ ಎತ್ತಿ ಹೊರಟು ನಿಂತರು.

ಮೂವರೂ ಹೊರಟೆವು.

ಬಡಕನಹಳ್ಳಿಗೆ ಹೆಸರಿಡುವ ಪ್ರಮೇಯವಿಲ್ಲ. ಹಳ್ಳಿಯ ಪ್ರತಿಯೊಂದು ಭಾಗದಿಂದಲೂ ಆಸ್ಥಿತಿ ಎತ್ತಿ ಕಾಣುತ್ತೆ. ಉಪಾಧ್ಯಾಯರು ನಮಗೆ ದೂರದಿಂದಲೇ ಅವರ ಮನೆಯನ್ನು ತೋರಿಸಿ—ಮುಂದೆ ನಡೆದರು. ನಾನು ಅರ್ಥಮಾಡಿಕೊಂಡು "ನೀವು ಮುಂದೆ ನಡೀರಿ. ನಾವೂ ಬಂದೆವು" ಅಂದೆ. ನಮಗೆ ಆಗಿದ್ದ ಸುಸ್ತಿನಲ್ಲಿ ಉಪಾಧ್ಯಾಯರು ನಮಗೆ ಮಾಡಿದ ಉಪಚಾರ-ನಮ್ಮನ್ನು ಹೆತ್ತವರೂ, ಕೂಡಿದವರೂ ಮಾಡುವ ಉಪಚಾರ ಮೀರಿತು.

"ಅನ್ನದಾತಾ ಸುಖೀಭವ" ಅಂತ ಮನಸಾರ ಹರಸಿದೆ. ವೀಳ್ಯ ಅಗಿಯುತಾ ಜಗಲೀ ಮೇಲೆ ಕೂತೆವು.

ಉಪಾಧ್ಯಾಯರು ಅಂದರು "ಏನೋ-ನಿಮ್ಮಂತಹ ನಾಗರೀಕರು ನಮ್ಮ ಉಪಚಾರಕ್ಕೆ ಸಿಗುವುದೇ ದುರ್ಲಭ. ಏನು ಕಮ್ಮಿಯಿದ್ದರೂ ಕ್ಷಮಿಸಿ" ಅಂತ.

ಕೂಡಲೇ ನಮ್ಮ ಕೃತಜ್ಞತೆಯನ್ನು ಸೂಚಿಸಿದೆ.

ಆಗ ಚಂದಿ "ನಿಮ್ಮ ಸ್ಕೂಲು ಹೇಗಿದೆ? ಇಲ್ಲಿ ಜನರು ವಿದ್ಯಾ ಕಲಿಯೋಕೆ ಇಷ್ಟವಾಗಿದ್ದಾರೋ?" ಅಂತ ಕೇಳಿದ. ಅವನಿಗೆ ತಲಗೇರಿ ಜ್ಞಾಪಕ ಬಂದಿರಬೇಕು.

ಅದಕ್ಕೆ ಉಪಾಧ್ಯಾಯರು "ಅದಕ್ಕೇನು ಸ್ವಾಮೀ? ನಾವು ಯಾವುದಕ್ಕೂ ಜನರಲ್ಲಿ ತಪ್ಪು ಕಂಡುಹಿಡಿಯೋಕೆ ಆಗೊಲ್ಲ. ಹಳ್ಳಿಯವರಿಗೆ ವಿದ್ಯೆಯಲ್ಲಿ ಆಸಕ್ತಿಯೇನೋ ಇದೆ. ಆದರೆ ಅವರಿಗೆ ಆಸಕ್ತಿಗೆ ತಕ್ಕಹಾಗೆ ಕಲಿಸೋಕೆ ನಿರ್ಮಾಣವಾಗಿರುವ ನಮಗೆ ಆಸಕ್ತಿ ಬರೋ ಹಾಗೆ ನಮ್ಮನ್ನಿಟ್ಟಿಲ್ಲ ಅಷ್ಟೆ. "ವಿದ್ಯಾದಾನ" ಅನ್ನೋದು ಅತಿ ಶ್ರೇಷ್ಠವಾದ ದಾನ—ಹೌದು. ಆದರೆ—ಅದು ನಮಗೊಂದು

ಜೀವನೋಪಾಯ. ಹಾಗಾಗಿ ಅದರಿಂದ ನಮ್ಮ ಜೀವನ ಸಾಗಲಿಕ್ಕೆ ಎಷ್ಟು ಉಪಾಯ ಕಲ್ಪನೆಯಾಗುತ್ತೋ—ಅಷ್ಟೇ ನಮ್ಮಲ್ಲಿ ಆಸಕ್ತಿ ಹುಟ್ಟುತ್ತೆ. ನಾನು ಖಂಡಿತ ಹೇಳ್ತೀನೆ ಸ್ವಾಮೀ—ಬೇರ ಸಂಪಾದನೆ ಮಾರ್ಗಗಳನ್ನು ಒದಗಿಸಿಕೊಳ್ಳದೆ ನಮಗಿರುವ ಚಾಕರಿಯಿಂದ ಸಂಸಾರ ನಡೆಸೋದು ಅತೀಕಷ್ಟ. ಅತೀಕಷ್ಟವೇನು ? ಅಸಾಧ್ಯ! ಈಗ ಜೀವನದ ಮಟ್ಟವೇರಿದೆ ಅಂತ ಎಲ್ಲಿಯೂ ತಿಳಿದ ವಿಷಯವಾಗಿದೆ. ಹಾಗೂ ನಾವು ಪತ್ರಿಕೆಗಳಲ್ಲಿ ಪ್ರತಿದಿನ ಓದುತ್ತೇವೆ—ಎಲ್ಲೆಲ್ಲೂ ಪದಾರ್ಥಗಳ ಬೆಲೆ ಏರಿವೆ ಅಂತ. ಆದರೂ ಸಾಮಾನ್ಯ ಜನರಲ್ಲಿ ಕಾರಿನ ಬೆಲೆ, ರೇಡಿಯೋ ಬೆಲೆ ಏರಿವೆ ಅಂತಾ ಪಶ್ಚಾತ್ತಾಪವಿರುವಷ್ಟು—ನನ್ನಂಥಾ ಬಡಮನುಷ್ಯನಿಗೆ ಬೇಕಾದ ಅನ್ನ ಬಟ್ಟೆಯೇ ಕೊಳ್ಳಲಿಕ್ಕೆ ಅಸಾಧ್ಯ ಅಂತ ಮುಂದಟ್ಟಾಗಿಲ್ಲ—ನನ್ನಂಥಾ ಬಡ ಮನುಷ್ಯನಿಗೆ ಬಿಟ್ಟು. ನಾವಿರುವ ಈ ಪರಿಸ್ಥಿತಿಯಲ್ಲಿ ಯಾವ ತೆರವಾದ ಗೌರವ ವನ್ನು ಗಳಿಸಬಹುದು ? ಗುರುವಲ್ಲಿ ಗೌರವವಿಲ್ಲದೆ ಯಾವ ವಿದ್ಯೆ ಕಲಿಯಲು ಸಾಧ್ಯ? ನಾನು ಈ ಹಳ್ಳಿಯಲ್ಲಿದ್ದರೂ—ಅಮೆರಿಕಾ ಯೂರೋಪು, ರಷ್ಯಾ ದೇಶಗಳ ಚಿಕ್ಕ ಹುಡುಗರ ಸ್ಕೂಲುಗಳ ಮತ್ತು ಅವುಗಳ ಉಪಾಧ್ಯಾಯರುಗಳ ಚಿತ್ರಗಳನ್ನು ನೋಡಿ ದ್ದೇನೆ. ನೋಡಿ ನಂಗೆ ನಾಚಿಕೆಯಾಗಿ ಚಿತ್ರಗಳನ್ನು ಮಗುಚಿದ್ದೇನೆ. ನಮಗೂ ಸ್ವಾತಂತ್ರ್ಯ ಬಂದಿದೆ. ನಾವು ಇಂಗ್ಲೀಷರನ್ನು ಓಡಿಸುವಾಗ ಅವರ ಹ್ಯಾಟು, ಕ್ರಾಪು, ಪೌಡರುಗಳನ್ನು ಕಸಿದುಕೊಳ್ಳುವ ಬದಲು—ಅಥವಾ ಅವುಗಳ ಜೊತೆಗೆ ಅವರಲ್ಲಿರುವ ಒಳ್ಳೆ ನ್ಯಾಯ ನಿಯಮಗಳನ್ನಾದರೂ ಕಿತ್ತಿಟ್ಟುಕೊಂಡಿದ್ದರೆ ಚೆನ್ನಾ ಗಿರುತ್ತಿತ್ತು. ಅಷ್ಟೇಕೆ—ಈ ದೇಶದಲ್ಲಿ ಕೆಲವೆಡೆ ಇರೋ ಕಿರಿಸ್ತಾನೀ ಪಾದ್ರಿಗಳು ನಡೆಸುತ್ತಿರೊ ಶಾಲೆಗಳಿಗೂ, ಅವುಗಳ ಮಟ್ಟಕ್ಕೂ, ನಮ್ಮ ಶಾಲೆಗಳ ಮಟ್ಟಕ್ಕೂ ಇರೋ ವ್ಯತ್ಯಾಸ ನೋಡಿ....... ಸರಿ, ಹೀಗೇ ಹೇಳ್ತಾಹೋದರೆ ಕೊನೆಯೇ ಇಲ್ಲ. ಸುಸ್ತಾಗಿಧೀರಿ, ಸ್ವಲ್ಪ ವಿಶ್ರಮಿಸಿಕೊಳ್ಳಿ. ನಾಳೆ ನಮ್ಮ ತಂದೆ ವೈದೀಕ. ತಾವೂ ಅವರ ಆಶೀರ್ವಾದಕ್ಕೆ ಭಾಗಿಗಳಾಗಿ. ನಾನು ಸ್ವಲ್ಪ ಹಳ್ಳಿವಳಗೆ ಸುತ್ತಿ ಬರುತ್ತೇನೆ" ಅಂತ ಹೇಳಿ—P. B. S. ಅಂತ ಬರೆದಿರೊ ಎರಡು ಬೆಂಚುಗಳನ್ನು ನಮಗೆ ತೋರಿಸಿದರು.

ತುಸ ಹೊತ್ತಿನಲ್ಲಿ ರಾಜನನ್ನೂ ರಾಜನ ಸೈಕಲ್ಲನ್ನೂ ಮರೆತು ಆ ಬೆಂಚುಗಳ ಮೇಲೆ ಕೈಕಾಲುಗಳನ್ನು ನೀಟಿದೆವು.

—"ಕೇಫ"

—o—

ಜನತೆಯಲ್ಲಿ ಬಿನ್ನಹ!

ಉಪವಾಸ ಕೂತರೆ, ಇನ್ನು ಮೇಲೆ ಆತ್ಮಹತ್ಯೆಗೆ ಪ್ರಯತ್ನ ಮಾಡಿದ, ಎಂಬ ಆಪಾದನೆ ಹೊರಿಸಿ, ಕೋರ್ಟಿಗೆಳೆದು, ವಿಚಾರಣೆ ನಡೆಸಿ, ಕಾರಾಗೃಹಕ್ಕೆ ದಬ್ಬುತ್ತಾರೆ ಎಂಬ ಸುದ್ದಿ ಹೊರಟಿದೆ.

ಆದರೆ, ಈ ರೀತಿ ಕಾನೂನು ತರುವ ಮೊದಲು ಹಲವು ವಿಷಯಗಳನ್ನು ಸರ್ಕಾರವೂ ಜನತೆಯೂ ವಿಚಾರಮಾಡಬೇಕಾಗುತ್ತದೆ. ಆಮರಣಾಂತವೆಂಬ ಷರತ್ತಿಲ್ಲದೆ, ದೇಹಾರೋಗ್ಯಕ್ಕಾಗಿ, ಅಥವ ಒಪ್ಪತ್ತು ಮಾತ್ರ, ಒಂದು ದಿನ ಮಾತ್ರ, ಒಂದು ವಾರದಷ್ಟೇ, ಹತ್ತೇ ಹತ್ತು ದಿನಕ್ಕೆ ಮಾತ್ರ, ಎಂಬ ನಿಯಮದ ಮೇಲೆ ಉಪವಾಸ ದೀಕ್ಷೆ ವಹಿಸಿದರೆ, ಅಂಥವರಿಗೆ ತೊಂದರೆ ಕೊಡಕೂಡದು. ಅಲ್ಲದೆ, 8 ರಿಂದ 10ರ ವರೆಗೂ ಒಬ್ಬರು ಉಪವಾಸ ಕೂರುವುದು, 10ಕ್ಕೆ ಮತ್ತೊಬ್ಬರು ಭೋಜನಮಾಡಿ ಬಂದು 12ರ ವರೆಗೆ ಕೂರುವುದು. ಇಂಥ ಉಪವಾಸ ತಪಸ್ಸಿಗೂ ಅವಕಾಶವಿರಬೇಕು. "ಆಮರಣಾಂತ" ಎಂದು ಸಾರಿದರೂ ಕೂಡ, ಯಾರ ಮರಣದ ವರೆಗೆ, ಉಪವಾಸ ಇರುವವರ ಮರಣವೋ, ಅವರ ಶತ್ರುಗಳ ಮರಣವೋ, ಎಂಬುದನ್ನ ಪತ್ತೆ ಹಚ್ಚಬೇಕು. ಇನ್ನೊಬ್ಬರ ಮರಣದ ತನಕ ಈತನ ಉಪವಾಸ ವಾದರೆ, ಅದು ಆತ್ಮಹತ್ಯೆ ಪ್ರಯತ್ನದ ಕಾನೂನಿಗೆ ಹೊರಗು.

ಉಪವಾಸ ದೀಕ್ಷೆಯನ್ನು ನಿರೋಧಿಸಿದರೆ, ಆ ಜನ ದೇಶದ ಅವಗಾಹನೆಗೆ ಬರುವ ಬೇರೆ ದಾರಿ ಯಾವುದು? ತಲೆಕೆಳಗಾಗಿ ಚೌಕ ಚೌಕದಲ್ಲೂ ನಿಲ್ಲಬಹುದೆ? ಎಲೆಕ್ಟ್ರಿಕ್ ಕಂಬಗಳ ಮೇಲೆ, ತಮ್ಮ ಆಸೆ ಈಡೇರುವ ತನಕ, ಕುಕ್ಕುಟಾಸನದಲ್ಲಿ ಕೂರಬಹುದೆ? ಮತ್ತೊಂದು ಕಾನೂನುಬದ್ಧ ಮಾರ್ಗವನ್ನು ಇತ್ಯರ್ಥಗೊಳಿಸದೆ, ಏಕಾಏಕಿ ಕೀರ್ತಿಪಥವನ್ನು ಅಡ್ಡಗಟ್ಟಬಾರದು.

ಆ ಮೇಲೆ, ಒಬ್ಬರು ಉಪವಾಸ ಕೂತರೆ, ಈಗ ನೂರಾರು ಜನಕ್ಕೆ ಊಟ ಸಿಗುತ್ತದೆ. ಹಸಿವು ದಾಹಗಳನ್ನೆದುರಿಸಿ, ಅಂಗಲಾಗಿ ಮಲಗಿರುವ ಆ ಒಬ್ಬ ವ್ಯಕ್ತಿಯ ಶುಶ್ರೂಷೆಗಾಗಿ ಹತ್ತಾರು ಸ್ವಯಂಸೇವಕರಿಗೆ ಸಂತರ್ಪಣೆ, ಅದಕ್ಕೊಂದು ಸ್ವಾಗತ ಸಮಿತಿ, ಅವರಿಗೊಂದು ಫಂಡು, ಅದಕ್ಕೆ ರಶೀತಿ ಪುಸ್ತಕ.... ಇದಲ್ಲದೆ, ಆತನಿಗೂ ಅವರಿಗೂ ಹೂಮಾಲೆಗಳು, ಬಾತ್ಮೀದಾರರಿಗೆ ಪ್ರತ್ಯೇಕ ಉಪಚಾರ, ಬೋರ್ಡು ಬರೆಯುವ

ವರಿಗೆ ಸಂಭಾವನೆ, ಫೋಟೋ ತೆಗೆಯುವವರ ಬಿಲ್ಲು, ಮೆರವಣಿಗೆಗೆ ಬ್ಯಾಂಡು, ಗ್ಯಾಸ್‌ಲೈಟು, ಕೂಗುವ ಹುಡುಗರಿಗೆ ಬೀಡಿ, ಪೆಪ್ಪರ್ಮಿಂಟು, ಅರಿಕೆಗಳು, ಹೇಳಿಕೆಗಳು, ನಿಯೋಗ ಗೋಷ್ಠಿಗಳಿಗೆ ರೈಲು ಚಾರ್ಜು; ಇನ್ನೂ ಏನೂ ಆಗಿಲ್ಲ ಆತನಿಗೆ, ನಾಳೆ ಸಂಜೆಯೊಳಗೆ ಏನಾದರೂ ಆಗಿಯೇ ಆಗಬೇಕು, ಎಂದು ಮುಂತಾಗಿ ವೈದ್ಯರ ಪ್ರಕಟಣೆಗಳನ್ನು ಅಚ್ಚು ಹಾಕಿಸಿ ಮಾರುವ ಪೇಪರುಗಳು, ಉಪವಾಸ ನಿಲ್ಲಿಸುವಾಗ ಅಗತ್ಯ ಬೇಕಾದ ಕಿತ್ತಲೆ ಹಣ್ಣುಗಳಿಗಾಗಿ ಅವುಗಳ ಶೇಖರಣೆ, ನೆಂಟರಿಷ್ಟರಿಗೆಲ್ಲ ದಿನವೂ ತಂತಿಗಳು, ಮೇಲಿನ ಅಧಿಕಾರಿಗಳಿಗೂ, ಇತರ ನೊಂದ ಸಂಸ್ಥೆಗಳಿಗೂ ಪತ್ರವ್ಯವಹಾರದ ಟಪಾಲ್ ಚಾರ್ಜು ಸಾಕು ನಿಲ್ಲಿಸುತ್ತೇನೆ ಎಂದು ಆತ ಹೇಳುತ್ತಲೂ ಸಾಲದು ಮುಂದುವರಿಸು ಎಂದು ಹುರಿದುಂಬಿಸುವ ನಾಯಕರ ಮನ್ನಣೆಯ ಖರ್ಚು........ಒಂದೇ ಎರಡೇ?

ಒಬ್ಬ ಉಪವಾಸಿಯಿಂದ, ನೂರಾರು ಜನ ತಮ್ಮ ಹಸಿವನ್ನು ವಾಸಿಮಾಡಿಕೊಳ್ಳಬಹುದು. ಆ ಊರು ಇತಿಹಾಸ ಪ್ರಸಿದ್ಧವಾಗುತ್ತದೆ; ಭೂಪಟದಲ್ಲಿ ಚುಕ್ಕಿಯಾಗಿ ಆಚಂದ್ರಾರ್ಕ ಮೆರೆಯುತ್ತದೆ. ಅಲ್ಲೊಂದು ಶಿಲಾಪ್ರತಿಮೆ ಬರುತ್ತದೆ. ಏತಕ್ಕಾಗಿ ಪ್ರಸಿದ್ಧಿ—ಎಂದು ಆ ರಾಜ್ಯದ ಹುಡುಗರನ್ನೆಲ್ಲ ಪರೀಕ್ಷಕರು ಕೇಳುತ್ತಾರೆ.

ಇಷ್ಟು ಜನೋಪಕಾರಿಯಾದ ಈ ಪದ್ಧತಿಯನ್ನು, ಇನ್ನು ಅದು ಶೈಶವಾವಸ್ಥೆಯಲ್ಲಿರುವಾಗಲೇ, ಶವಾವಸ್ಥೆಗೆ ಯಾರೂ ಇಳಿಸಬಾರದೆಂದು ಸವಿನಯ ವಿನಂತಿ.

—ಪಾಟಾಳಿ.

—o—

"ಮೈಸೂರು ವಿದ್ಯಾಭ್ಯಾಸ ಸುಧಾರಣಾ ಸಮಿತಿಯ ವರದಿಯು ತಮ್ಮ ಕೈ ಸೇರಿದಾಗ ಶಾಸನ ಸಭೆಯ, ಉಪಾಧ್ಯಾಯ ಕ್ಷೇತ್ರದಿಂದ ಆರಿಸಲ್ಪಟ್ಟ, ಮಾನ್ಯ ಸದಸ್ಯರೊಬ್ಬರು ಅದರ "ನೋಟ್ಸ್" ಗಾಗಿ ಪೇಟೆಯಲ್ಲೆಲ್ಲಾ ಅಲೆದಾಡಿದರು ಎನ್ನುವ ವದಂತಿಯು ಕುಹಕವೆಂದು ಈಗ ತಿಳಿದುಬಂದಿದೆ".

ಜೋಡು ರಿಫೇರಿ

"ಹಳೇ ಜೋಡು ರಿಫೇರೀ" ಎಂದು ಕೂಗಿದಾಗ ಆರಾಮ ಕುರ್ಚಿ ಮೇಲೆ ಕೂತ ನನಗೆ ಎಚ್ಚರವಾಯಿತು. ಮಂಗಸೂತ್ರಕ್ಕೆ ಮಣಿ ಪೋಣಿಸುತ್ತಿದ್ದ ಮೀನಾಕ್ಷಿ ನನ್ನ ನೋಡಿದಳು. ಅರ್ಥಪೂರ್ಣವಾಗಿ ಮೂಲೆಯಲ್ಲಿ ಬಿದ್ದ ಜೋಡನ್ನು ನೋಡಿದಳು. ನಾನು ಹಣೆಯಲ್ಲಿ ನೆರಿಗೆ ಮೂಡಿಸಿ ಗೀರು ಮೀಸೆಮೇಲೆ ನವಿರಾಗಿ ನಾಲಿಗೆ ಆಡಿಸಿ ಹೆಗಲಮೇಲಿನ ಟೌಲನ್ನು ಸರಿಮಾಡಿಕೊಂಡು ಒರಗಿದ್ದ ಬೆನ್ನನ್ನು ನೆಟ್ಟಗೆ ಮಾಡಿ ಕುಳಿತೆ. ಆ ಭಾನುವಾರವೂ ಅವನು ನಮ್ಮ ಮನೆ ಮುಂದೆ ನಿಂತು ಮತ್ತೊಮ್ಮೆ ಕೂಗಿದ. "ಕರೆಯಲಾ?" ಎಂದೆ. ಅವಳು ಮಾತೆ ಆಡಲಿಲ್ಲ. ಹಿಂದೊಮ್ಮೆ ಕೋದಂಡನೆಂಬ ಕೊಡೆ ರಿಫೇರಿಯವನು ಬಂದುದು ನೆನಪಿಗೆ ಬಂದಿರಬೇಕು ಅವಳಿಗೆ.

"ನಾನು ಸುಡು ಬಿಸುಲಲ್ಲಿ ಬರಿಗಾಲಲ್ಲಿ ಹೋಗುವುದು ನಿನಗೆ ಪ್ರೀತಿಯೇ?"

"ಹೌದು ನಿಮಗೆ ಎಷ್ಟು ತೊಂದರೆ ಆದರೆ ಅಷ್ಟು ನನಗೆ ಹಿತ...."

"ಕೋಪ ಮಾಡ್ಕೊಬೇಡ್ವೆ...."

"ಮತ್ತೆ ಒಂದು ವಾರದಿಂದ ಹೇಳ್ತಾ ಇದ್ದೀನಿ ಹರಿದ ಉಂಗುಷ್ಟ ಹೊಲಿಸಬಾರದೇಂತ—ಈಗ ನನ್ನ ಕೇಳಿ ನಿಮ್ಮ ಅರ್ಥವಿಲ್ಲದ ಪ್ರಶ್ನೆಗಳನ್ನ"

ಅದು ನಿಜ. ಅವಳೇನೋ ಹೇಳುತ್ತಿದ್ದಳು. ನಾನು ಇವತ್ತು ನಾಳೇ ಎಂದು ಜೋಡು ಎಳೆದುಕೊಂಡು ತಿರುಗುತ್ತಿದ್ದೆ. "ಹಳ್ಳೇ ಜೋಡು ರಿಫೆರೀ" ಎಂದು ನನ್ನ ಕಡೆ ದೊಡ್ಡ ಬಾಯಿಬಿಟ್ಟು, ಆ ರಿಪೇರಿಯವ ಬೊರ್ಗರೆದ. ಬಾರಯ್ಯಾ ಎಂದು ಕೈಮಾಡಿ ಕರೆದದ್ದಾಯಿತು. ಅವನು ತನ್ನ ಕೈಚೀಲದೊಂದಿಗೆ ಮನೆಯ ಕಾಂಪೌಂಡಿಗೆ ಬಂದು, ಚೇಪೆ ಮರದ ನೆರಳಿನಲ್ಲಿ ಹಾಯಾಗಿ ಕುಳಿತ. ನಾನು ಮೀನಾಕ್ಷಿ ಇಬ್ಬರೂ ಸೇರಿ ಹಳೆಯ ಜೋಡುಗಳನ್ನೆಲ್ಲಾ ಪಾಲೀಷ್ ಮಾಡಿ, ಕಡೆಗೆ ಮೂರುವರೆ ಜೊತೆ ಅವನ ಮುಂದೆ ಹಾಕಿದೆವು. ಅವಳದ್ದು ಒಂದು ಜೊತೆ ಪ್ರತ್ಯೇಕ ಇಟ್ಟುಕೊಂಡಳು.

ಅವನು ಮಹಾ ಕಿಲಾಡಿಯಂತೆ ಕಂಡ. ಕೈಯ್ಯಲ್ಲಿ ಮುಟ್ಟದೇ ಅನುಮಾನಿಸತೊಡಗಿದ. ನನಗೆ ರೇಗಿತು. ಅದನ್ನು ಸೂಕ್ಷ್ಮವಾಗಿ ಅವ ಗ್ರಹಿಸಿರಬೇಕು.

ಮೊದಲನೆ ಜೊತೆಯಲ್ಲಿ ಎಡಗಾಲಿನದನ್ನು ಮೊದಲು ಕೈಗೆತ್ತಿಕೊಂಡ. ಮೊಸಳೆಯಂತೆ ಅದು ಮುಂದುಗಡೆ ಬಾಯಿಬಿಟ್ಟಿತ್ತು. ಅದರ ಬಾಯಿ ಬಿಡಿಸಿ ನೋಡಿದ. ಕೊಡವಿದ. ಹಳೆಯ ರೊಟ್ಟಿನ ಚೂರು — ತೊಗಲಿನ ತುಕುಡ ಅದರಿಂದ ತೂರಿಬಂತು.

"ನೋಡಿದಿರಾ"

"ಏನು"

"ಅಲ್ಲಾ — ಜಾತಿ ಬುದ್ಧಿ ನನ್ಮಕ್ಕಳದ್ದು"

"ಏನಯ್ಯಾ ಅದು ?"

"ಎಷ್ಟು ಕೊಟ್ಟದ್ರಿ ಸ್ವಾಮಿ ಇದಕ್ಕೆ"

"ಎಷ್ಟೇ ?.... ನನಗೆ ಮರ್ತುಹೋಗಿದೆ"

"ನನಗೇನು ಗೊತ್ತೂಂದ್ರೆ"

"ಹ ಹ ಹ.... ನಿಜ ರಾಯರೆ ನೀವು ಅಮ್ಮವರನ್ನ ಕೇಳಿದ್ದು ಸರಿಯೆ"

"ಅದು ಹೇಗಯ್ಯಾ"

"ನಿಮಗೆ ಗೊತ್ತಿಲ್ಲಾಂತ ನನಗೂ ಗೊತ್ತಿತ್ತು, ಆದರೂ ಕೇಳಿದೆ"

"ನಿನಗೆ ಆಗಲೆ ಗೊತ್ತಿತ್ತೆ ?"

"ಹೌದೂಂತಿನಿ — ಅಮ್ಮ ಅವರ ಅಪ್ಪಂದಿರನ್ನ ಕೇಳಿದರೆ ಗೊತ್ತಾಗಬಹುದು"

"ಹೌದೇನೆ ?"

"ಇರಬಹುದೂಂದ್ರೆ"

"ಪರವಾಗಿಲ್ಲ ಕಣೊ, ಒಳ್ಳೆ ಖದೀಮ ಜೋಡು ರಿಪೇರಿಯುವನಿದ್ದಿ ನೀನು."

"ಈ ಜೋಡಿನ ದೆಸೆಯಿಂದ ನಿಮ್ಮನೇಲಿ ಜಗಳವಾಗಿದೆ"

"ಹೌದೆ ?"

"ನಿಜವಾಗಲೂ — ಈ ಜೋಡು ನಿಮ್ಮ ಕಾಶಿ ಯಾತ್ರೇಲಿ ಕೊಟ್ಟದ್ದು — ಅಲ್ಲವೆ ?"

ನಾನು ಸುಸ್ತು. ಮೀನಾಕ್ಷಿ ನಸುನಕ್ಕಳು. ನಿಜವಾಗಿ ಅದು ಅತ್ತೆ ಮನೆಯವರು ಕೊಟ್ಟದ್ದು. ಅದರ ದೆಸೆಯಿಂದ ಜಗಳವೇನೋ ಆಗಿತ್ತು. ನಮ್ಮ ತಂದೆ ಹಳೇ ಕಾಲದವರು. ಕಾಶಿಯಾತ್ರೆ ಕಾಲದಲ್ಲಿ ಹಳೇ ಕಾಲದ ಪಾಪಾಸುಗಳನ್ನು ಕೊಡಬೇಕೆಂದು ಹಟಹಿಡಿದರು. ಮಾವನವರು ಕೊಂಚ ಈಗಿನ ಕಾಲದ ಇಸಮು. ಅಳಿಯ ಮದುವೆ ಆದ ಮೇಲೂ ಉಪಯೋಗಕ್ಕೆ ಬರಲಿ ಅಂತ ಈ ಮಾದರಿ ಜೋಡು ತಂದಿದ್ದರು. "ಸಂಪ್ರದಾಯವಿಲ್ಲ; ಕಾಲ ಬದಲಾಯಿಸಿ

ಹೋಯಿತು—ಕಾಶಿಯಾತ್ರೇಲಿ ಬೂಡ್ಸು ಹಾಕೊಳ್ಳಿ ನನಗೇನು" ಎಂದು ಸಿಟ್ಟು ಗೊಂಡಿದ್ದರು ನನ್ನ ಜನಕರು. ಅವರನ್ನ ಸಮಾಧಾನ ಪಡಿಸಬೇಕಾದರೆ ಸಾಕು ಸಾಕಾಗಿಹೋಗಿತ್ತು. ನನ್ನ ತಂದೆಯ ಸಿಟ್ಟೇ ಹಾಗೆ—ದೊಡ್ಡ ದೊಡ್ಡ ತಪ್ಪನ್ನು ನಿರಾಯಾಸವಾಗಿ ಕ್ಷಮಿಸುವರು. ಚಿಕ್ಕ ಪುಟ್ಟದರಲ್ಲಿ ಅತಿಯಾಗಿ ಕೂಗಾಡುವರು. ಎರಡು ಉಲ್ಲನ್ ಸೂಟು ಕೊಡ್ತೀನಿ ಅಂದ ಮಾವ, ಒಂದರಲ್ಲೇ ಮುಗಿಸಿದ್ದ. ಜರತಾರಿ ಮೊಗಟ ಅಷ್ಟರಲ್ಲೇ ಇತ್ತು. ವಾಚು ಎಂದರೆ ಎಲ್ಲೋ ಪೀಚು ಅಳಿಯ ಎಂದಿದ್ದರು. ಇಂಥಾದ್ದಕ್ಕೆ ರೇಗಬಾರದೆ? ನಾನಂತೂ ರೇಗುವಹಾಗಿಲ್ಲ. ಅಪ್ಪ ನಾದರೂ ಈ ವಿಷಯಕ್ಕೆ ರೇಗಬಾರದೆ? ಉಹೂಂ. ಈ ಕೇವಲ ಪಾಪಾಸಿನ ವಿಷಯಕ್ಕೆ ಊಟ ಬಿಟ್ಟಿದ್ದರು.

ಇದೆಲ್ಲಾ ಈ ಜೋಡು ರಿಫೇರಿಯವನಿಗೆ ಹೇಗೆ ಗೊತ್ತಾಯಿತು? ಮೀನಾಕ್ಷಿ ನಸುನಕ್ಕದ್ದು ನನಗೆ ಹಿಡಿಸಲಿಲ್ಲ. ಅವಳೆದುರಿಗೆ ನನ್ನ ಜೋಡಿನ ವಿಷಯದ ಗುಟ್ಟು ಹೊರಬಿದ್ದುದೂ ನನಗೆ ಹಿಡಿಸಲಿಲ್ಲ. ಇದೇನು ನನ್ನ ಗ್ರಹಚಾರವೋ ಕಾಣೆ—ನನಗೆ ಸಿಕ್ಕುವ ರಿಪೇರಿಯವರೆಲ್ಲಾ ಹೀಗೇ ಕಾಡುವರು. ಆ ಕೊಡೆ ರಿಫೇರಿ ಕೋದಂಡ—ಮತ್ತೆ ವ್ಹಾಚ್ ರಿಪೇರಿಯವ, ಈಗ ಈ ಜೋಡು ರಿಪೇರಿಯ ಜೋಕುಮಾರ. ಈ ಮಕ್ಕಳಿಗೇಕೆ ತಲೆಹರಟೆ? ತಮ್ಮ ಕಸುಬೇನು ಮಾಡಿಕೊಂಡು ಹೊರಡಬಾರದೇ ನನ್ನ ಲಗ್ನದ ವಿಷಯ ಕಟ್ಟಿಕೊಂಡು ಈ ರಿಫೇರಿ ಆಳಿಗೇನು ?....ನನಗೆ ರೇಗಿತು.

"ಇಲ್ನೋಡು—ನಿನ್ನ ತಲೆಹರಟೆ ಬೇಕಾಗಿಲ್ಲ—ಇದರ ರಿಪೇರಿಗೇನು ಆಗುತ್ತೆ ಹೇಳು........"

"ಇವು ರಿಪೇರಿಗಾ ಸಾರ್"

"ಮತ್ತೆ ನಿನ್ನೇತಕ್ಕೆ ನಾನು ಕರೆದದ್ದು"

ಸರಸರನೆ ಎಲ್ಲಾ ಜೋಡುಗಳನ್ನೂ ಪರಿಶೀಲಿಸಿ—"ಇವು ರಿಫೇರಿ ಮಾಡಿಸಿ ನಿಮ್ಮ ಪಾದಾ ಅಲಂಕರಿಸೋಕಿಂತ— ನನ್ನ ಹಳೇ ಜೋಡಿನ ರಾಶಿಯಲ್ಲಿ ಇದ್ದರೇ ಒಳ್ಳೇದು ಸ್ವಾಮಿ—ಏನು ಕೊಡಲಿ ಹೇಳಿ ಎರಡೂವರೆ ಜೊತೆಗೆ .. ...."

ನನ್ನ ಪಿತ್ತ ನೆತ್ತಿಗೇರಿತು. ಮೂರುವರೆ ಜೊತೆ ಮುಂದಿಟ್ಟುಕೊಂಡು ಎರಡೂ ವರೆ ಅಂತ ದಬಾಯಿಸ್ತಾ ಇದ್ದಾನಲ್ಲಾ. ಇವು ರಿಫೇರಿಮಾಡೋಕೂ ಲಾಯಖ್ಖಿ ಲ್ಲಾಂತ ಇವ ಅನ್ನಬಹುದೆ?

"ಎರಡೂವರೆ ಜೊತೆ ?....ನಿನ್ನೆದುರಿಗೆ ಇರೋದು ಎಷ್ಟು ಎಣಿಸಿ ನೋಡು"

"ನಿಮ್ಮ ಮಾವನವರು ಕೊಟ್ಟಿದ್ದಕ್ಕೆ ಬೆಲೆಯೆ? ಬಿಟ್ಟು ಬಂದ ಮೆಟ್ಟಿಗೆ ಹಳೆಯ ದಾದ ಮೇಲೂ ನೀವು ಹಣ ಕೇಳಬಹುದೆ?—ಇಲ್ಲ ಹಾಗೆ ನೀವು ಕೇಳಬಾರದು

ಒಳ್ಳೆ ಗುಲಾಬಿ ಹೂವಿನಂಥ ಹುಡುಗೀನ್ನೂ ಧಾರೆ ಎರೆದುಕೊಟ್ಟು—ಮೆಟ್ಟನ್ನೂ ಕೊಟ್ಟ ಮಾವನನ್ನು ತಂಪು ಹೊತ್ತಿನಲ್ಲಿ ನೆನೆಯಬೇಕು ಸ್ವಾಮಿ—ಅದಕ್ಕೆ ನನ್ನ ಮಾವನ ಕಾಲು ಸುಡದಿರಲೀಂತ ನಾನೇ ನನಗೆ ಹೆಣ್ಣು ಕೊಟ್ಟ ಪುಣ್ಯಾತ್ಮನಿಗೆ ಒಂದು ಜೊತೆ ಎಕ್ಕಡ ಹೊಲೆದುಕೊಟ್ಟಿದ್ದೀನೆ ಬೇಕಾದರೆ ಕೇಳಿ ನೋಡಿ."

ನನಗೆ ಕಸಿವಿಸಿಯಾಯ್ತು. ಈ ಮೀನಾಕ್ಷಿಯನ್ನು ಆಜೀವ ಪರ್ಯಂತ ಗಂಟುಹಾಕಿದ ಮಾವನಿಗೆ ನಾನು ಬೂಡ್ಸು ಕೊಡಿಸಬೇಕಿತ್ತೆಂದು ಈತ ಹೇಳ ಬಹುದೆ? ಮೇಲಾಗಿ ಮಾವ ಕೊಟ್ಟ ಚಪ್ಪಲಿಗೆ ನಾನೇಕೆ ಕಾಸು ಪಡೆಯಬೇಕೆಂಬ ಅವನ ವಾದ ಸೂಕ್ತವಾಗಿದ್ದರೂ ನನಗೆ ನೆತ್ತಿ ಉರಿಸಿತು.

"ತಲೆಹರಟೆ ಬೇಡಾಂತ ಆಗಲೇ ಹೇಳಲಿಲ್ಲವೆ?—ನಿನ್ನ ಕೆಲಸವೆಷ್ಟು ಅಷ್ಟು ಮಾತಾಡು. ನಿನಗೆ ನಮ್ಮ ಮಾವನ ವಿಚಾರ ಬೇಡ" ಎಂದು ಗದರಿದೆ. ಪಾಪ ಅವನು ಮೆತ್ತಗಾದ. ತನ್ನ ತವರುಮನೆಯ ಕಡೆ ವಕಾಲತ್ತು ವಹಿಸಿ ಮಾತಾಡಿದ ಇವನ ಕಡೆ ಮೀನಾಕ್ಷಿಯ ಮನಸ್ಸು ಮೃದುವಾಗಿದ್ದು ಅವಳ ಕಣ್ಣಲ್ಲಿ ಕಂಡಿತು.

ಅವನೂ ನನ್ನ ಜೋಡುಗಳನ್ನು ಬದಿಗೆ ಸರಿಸಿ—ಹೂವನ್ನು ಎತ್ತುವಂತೆ ನವಿರಾಗಿ ಮೀನಾಕ್ಷಿಯ ಚಪ್ಪಲಿ ಕೈಗೆ ತೆಗೆದುಕೊಂಡ. ಅದು ಮಕಮಲ್ಲಿನ ಹೂವಿನ ಕೆತ್ತನೆ ಮಾಡಿದ ಹೆಂಗಸರ ಜೋಡು.

"ತಾಯಿ! ಹೊಲಿಗೆ ಹಾಕಿದರೆ ಕಾಲಿಗೆ ಒತ್ತಬಾರದು—ಹೂವಿನಲ್ಲಿ ಹೊಲೆದ ಹಾಗೆ ಹೊಲೆದು ಕೊಡ್ತೀನಿ" ಎಂದು ಅದರ ರಿಪೇರಿಗೇ ಪ್ರಾರಂಭಿಸಿದ.

ನನ್ನ ಗಂಡು ಚೇತನಕ್ಕೆ ಅವಮಾನಿತವಾದಂತಾಯಿತು. ಈ ರಿಫೇರಿಯವ ನನ್ನು ನನ್ನ ಮಾವನೇ ನನಗೆ ಅವಮಾನ ಮಾಡಲು ಕಳಿಸಿರಬಹುದೆ? ಎಂಬ ಸಂದೇಹ ನನಗೆ ಬಂತು. ಮೊನ್ನಿನ ದೀಪಾವಳಿಯಲ್ಲಿ ನನ್ನ ಷಡ್ಡಕನಿಗೆ ಕೈಗಡಿಯಾರ ಕೊಟ್ಟು ನನ್ನನ್ನು "ಬಾ" ಅಂತಲೂ ಕರೆಯದ ಮಾವನನ್ನು ಯಾವುದೋ ನೆಪಕ್ಕೆ ಅಳಕುವಂತೆ ಮಾತಾಡಿದ್ದೆ; ನಿಜ. "ಉಬ್ಬುಹಲ್ಲಿನ ಹುಡುಗೀನ್ನ ಯಾರು ಆಗುತ್ತಿದ್ದರು". "ಮದುವೆಯಲ್ಲೇ ವಾಚು ಕಾಣೆ ಇನ್ನ ದೀಪಾವಳಿಗೆ ಧೂಪಾರ್ತಿಯೇ ಗತಿ". "ಷಡ್ಡಕನಿಗಿರೋ B.A ಅನ್ನೊ ಕೊಂಬು ನನಗಿಲ್ಲ ನಿಜ—ಆದರೆ ಅನ್ ಎಂಪ್ಲಾಯ್ಡ್ ಬಿ.ಎ. ಗಿಂತ ಎಂಪ್ಲಾಯ್ಡ್ ಇಂಟರ್ರೇ ವಾಸಿ ಅಲ್ಲವೆ?" ಮುಂತಾಗಿ ಮೊನೆಚಾಗಿ ಮಾತಾಡಿದ್ದೆ. ಅದರ ಸೇಡು ತೀರಿಸಿಕೊಳ್ಳಲು ಈ ರಿಫೇರಿಯವನನ್ನು ಅಟ್ಟಿರ ಬಹುದೆ?

"ಅಲ್ಲಕಣಯ್ಯಾ—ನನ್ನ ಜೋಡಿನ ವಿಷಯ ಅಲ್ಲಿಗೇ ಬಿಟ್ಟು ಈ ಜೋಡಿನ ರಿಪೇರಿಗೆ ತೊಡಗಿದೆಯಲ್ಲಾ—ನಿನಗೇನು ಕೊಟ್ಟೆ".

"ನಾನ್ಯಾಕೆ ಹೆಚ್ಚು ಮಾತಾಡಲಿ ರಾಯರೆ ನ್ಯಾಯವಾಗಿ ಮಾತಾಡಿದರೆ ಮೈಮೇಲೇ ಬರ್‍ತೀರ. ಒಂದೇ ಸಮ ರೇಗಿಬಿಡ್ತೀರ. ಗಂಡಸರೇ ಅಷ್ಟು ಸ್ವಾಮಿ— ನೋಡಿ ಅಮ್ಮಾ ಅವರು ಒಂದು ಮಾತಾಡಿದರಾ! ಅವರೇ ಸಂತೋಸವಾಗಿ ದುಡ್ಡು ಕೊಟ್ರೆ ಕೊಡ್ಲಿ, ಇಲ್ಲವೇ ಸೀತಮ್ಮನವರ ಸೇವೇಂತ ಕೈಮುಗಿದು ಹೋಗ್ತೀನಿ".

"ಹೌದು ಹೌದು—ನಿನ್ನ ಮಾರುತಿರಾಯನ ಭಕ್ತಿಗೆ ಬೆಂಕಿಬಿತ್ತು—ನಿನ್ನ ಕೆಲಸಕ್ಕೆ ಅಭಿಮಾನದ ಮಾತು ಬೇರೆ. ಬೊಗಳು ಏನು ಕೊಡಬೇಕು ನನ್ನ ಜೋಡು ರಿಫೇರಿಗೆ".

"ಅದನ್ನ ಕಂಪನಿಗೆ ಕಳಿಸಬೇಕು ಸ್ವಾಮಿ"

"ಕಂಪನಿಗೆ! ಯಾವ ಕಂಪನಿ"

"ಕಾನ್‌ಪುರಾಂತ ಒಂದೂರು—ಅಲ್ಲಿ ಒಂದು ಕಂಪನಿ ಇದೆ. ಹಳೇ ಕಬ್ಬಿಣಾನ್ನ ಭದ್ರಾವತೀಲಿ ಕಾಸಿ ಹೊಯ್ದು ಹೊಸಾದು ಮಾಡೋಹಾಗೆ ನಿಮ್ಮ ಎಕ್ಕಡಗಳನ್ನು ಅಲ್ಲಿ ಕರಗಿಸಿ ನಿಮ್ಮ ಅಳತೆಗೆ ಎರಕ ಹೊಯ್ದು ತರಿಸಿಕೊಬೇಕು ತಾವು."

ಎಲಾ ಚಂಡಾಲಾ ಯಾಪಾಟಿ ಸತಾಯಸ್ತಾ ಇದ್ದಾನಲ್ಲಾ ಈ ಪಾಪಿ. ಮಗೂಗೆ ಹೇಳೋ ಹಾಗೆ ಚಪ್ಪಲಿ ಕರಗಿಸೋ ಕಥೆ ಹೇಳಿ ನನಗೆ ಹೊಟ್ಟೆ ಚುರಕ್ ಅನ್ನಿಸಬಹುದೇ ಈತ!!

ಇಷ್ಟು ಹೊತ್ತಿಗೆ ಮೀನಾಕ್ಷಿಯ ಜೋಡನ್ನು ಸೊಗಸಾಗಿ ರಿಪೇರಿ ಮಾಡಿದ್ದ. ಠೀವಿಯಿಂದ ಅದನ್ನವಳು ಹಾಕಿಕೊಂಡು, ಹಿಂದುಮುಂದು ತಿರುಗಿ ತಿರುಗಿ ನೋಡಿಕೊಂಡಳು.

ಸರಸರನೆ ಒಳಕ್ಕೆ ಹೋಗಿ ಎರಡು ಚಪಾತಿ ಬದನೆಕಾಯಿ ಪಲ್ಯ, ಒಂದಿಷ್ಟು ಎಣ್ಣೆ ಹಾಕಿ ಅವನಿಗೆ ಕೊಟ್ಟಳು. ಹುಬ್ಬುಹಾರಿಸಿ ಅವನು "ನೋಡಿ ಸ್ವಾಮಿ— ಹೆಂಗಸರು ಎಂಗಸರೇ. ಯಾವ ಬಾಯಿಂದ ಈ ತಾಯಿ ತಾವ ದುಡ್ಡು ಕೇಳಲಿ! ಹಸಿದ ಬಡ್ಡಿಮಗನಿಗೆ ಇದಕ್ಕಿಂತ ದುಡ್ಡು ಬೇಕೆ?—ಒಳ್ಳೆಮಾತು, ನಗೋ ಮುಖ, ತಾಯಿ ನಿನ್ನ ಮನೆ ಉದ್ಧಾರವಾಗಲಿ—ನಿನ್ನ ತಾಳಿ ಭದ್ರವಾಗಿರಲಿ—ಮುತ್ತೈದೆಯಾಗು, ಮನೆ ತುಂಬಾ ಮಕ್ಕಳಾಗಲಿ" ಎಂದು ಹರಸಿದ.

ನನ್ನ ವರ್ತನೆ ನನಗೇ ಛೀ ಅನ್ನಿಸಿತು. ಅವನ ಮೇಲೆ ರೇಗಬಾರದಾಗಿತ್ತು. ಮೀನಾಕ್ಷಿಯನ್ನು ಹರಿಸಿದ್ದ. ಅವಳ ಮನೆ ಉದ್ಧಾರವಾದರೆ ನನ್ನ ಮನೆ ಬೆಳಗಿದಂತಲ್ಲವೆ?

ಹೆಂಗಸಿನಿಂದ- ಜೋಡು ರಿಪೇರಿಯವನ ಮುಖಾಂತರ ನನ್ನ ಕೊಬ್ಬು ನಯ ಮಾಡಿದ ಅರ್ಧಾಂಗಿಗೆ ವಂದಿಸಿದೆ. ನಿಜಕ್ಕೂ ನನ್ನ ಜೋಡುಗಳು ರಿಪೇರಿಯ ಹಂತ ಮೀರಿ ಅವನ್ನು ಹದಕ್ಕೆ ತರಬೇಕಿದ್ದರೆ ಕರಗಿಸೇ ಎರಕ ಹೊಯ್ಯಬೇಕಿತ್ತು.

"ಸ್ವಾಮಿ—ಬಡವ" ಎಂದು ನನ್ನ ಮೂರುವರೆ ಜೊತೆ ಚಪ್ಪಲಿ ತನ್ನ ಹಡಪಕ್ಕೆ ತುರುಕಿ ಹೊರಟೇ ಹೋದ. ನಾನು ಬೆಪ್ಪನಂತೆ ನಿಂತೇ ಇದ್ದೆ. ಮೀನಾಕ್ಷಿಯೇ ಅಂದಳು. "ನಮ್ಮಪ್ಪನಿಗೆ ಬರೆದು ದೀಪಾವಳಿಗೆ ಉಡುಗರೆಗೇಂತ ಒಂದು ಜೊತೆ ಜೋಡು ತರಿಸಿಕೊಡ್ತೀನಿ."

ರಿಪೇರಿಯಾದ ಅವಳ ಹೆಣ್ಣು ಚಪ್ಪಲಿ ಕಿಸಿ ಕಿಸಿ ನಕ್ಕಂತೆ ನನಗೆ ಭಾಸವಾಯಿತು.

—ದಾಶರಥಿ ದೀಕ್ಷಿತ್.

—O—



ಈ ಘೋಷಾ ಹಿಂದೆ ಅಮೆರಿಕನ್ ಹೆಣ್ಣೇ ಇದೆಯೋ ಏನೋ—ಪಾಕಿಸ್ತಾನ್ ಪೈಲ್ವಾನ್‌ನ ಕಾತುರ ನೋಡಿದರೆ

ರಾಷ್ಟ್ರಪಿತನ ಹೆಸರು ಹೇಳುತ್ತಾ

ಧರ್ಮಸಾಗರರಿಗೆ ದೇಶಭಕ್ತಿ ಅತಿಯಾಗಿ ಹೋಗಿತ್ತು. ದೇಶದ ಅತ್ಯಂತ ಪ್ರೇಮಿಗಳು ಅಧಿಕಾರಕ್ಕೆ ಬಂದಾಗಿನಿಂದ, ಧರ್ಮಸಾಗರರ ಸಲಹೆ ಮೇರೆ ಆಮದು ರಫ್ತು ಹತೋಟಿ ಹಾಕುವುದು ತೆಗೆಯುವುದರ ಮೂಲಕ ಧರ್ಮಸಾಗರರು ದೇಶವನ್ನೂ ದೇಶವಳ್ಳಾಳುವ ಸರ್ಕಾರವನ್ನೂ ಅತಿಯಾಗಿ ಪ್ರೀತಿಸಹತ್ತಿದ್ದರು.

ಚಿನ್ನದ ಮುಲಾಮು ಹಚ್ಚಿದ ಚೌಕಟ್ಟಿನ ದೊಡ್ಡದಾದ ರಾಷ್ಟ್ರಪಿತನ ಚಿತ್ರವನ್ನು ಅಂಗಡಿಯ ಹೆಬ್ಬಾಗಲಿಗೆ ತೂಗುಹಾಕಿದ್ದರು. ದಿನಾಲೂ ಅದಕ್ಕೆ ಅಂಗಡಿ ತೆಗೆಯುವಾಗ ದೊಡ್ಡ ದಂಡೆ ಹಾರ ಹಾಕೇ ನಂತರ ಅಂಗಡಿಯೊಳಗೆ ಕಾಲಿಡುತ್ತಿದ್ದರು.

ಸೋಮವಾರ ಬೆಳಿಗ್ಗೆ ಅಂಗಡಿಗೆ ಬರುತ್ತಾರೆ. ಹೆಬ್ಬಾಗಿಲ ಮೇಲೆ ಆ ಚಿತ್ರವೇ ಇಲ್ಲ. ಕಾವಲುಗಾರ ಅತ್ತ ಇತ್ತ ಬೆಬ್ಬೆಬ್ಬಾಗಿ ನೋಡುತ್ತಾನೆ. ಅವನು ಕಾವಲು ನಿದ್ರೆಮಾಡಿದಾಗಲೇ ಯಾರೋ ಚಿತ್ರವನ್ನು ಹಾರಿಸಿಕೊಂಡು ಹೋಗಿಬಿಟ್ಟಿದ್ದಾರೆ. ಅಂದರೆ ಅವನ ಕೆಲಸಕ್ಕೇ ಈಗ ಸಂಚು ಬಂದಿತೋ ಎನ್ನುವ ಭಯ.

ಧರ್ಮಸಾಗರರು ಕೋಪಿಸಿಕೊಳ್ಳಲೇಇಲ್ಲ. ಯಾರಿಗೋ ಪಾಪ! ರಾಷ್ಟ್ರಪಿತನ ಚಿತ್ರದ ಮೇಲೆ ಬಲು ಆಶೆಯಾಗಿದೆ. ತನಗೆ ಸ್ವತಃ ಕೊಳ್ಳಲು ಸಾಮರ್ಥವಿಲ್ಲದಿರಬಹುದು. ಅದಕ್ಕಾಗಿ ಈ ಚೌರ್ಯ ಮಾಡಿದ್ದಾನೆ. ಅವನೇ ಆ ಚಿತ್ರದ ಪೂಜೆ ಮಾಡಿಕೊಳ್ಳಲಿ ಎಂದು ಹೇಳಿದರು. ಬೇರೇ ಚಿತ್ರಕ್ಕೇ ಒಂದು ಆರ್ಡರ್ ಕೊಟ್ಟರು.

ಒಂದು ವಾರದಲ್ಲೇ ಬೇರೇ ಚಿತ್ರ ಸರಬರಾಜಾಯಿತು. ಒಂದು ವಾರ ಅದಕ್ಕೆ ಪ್ರಾತಃ ಪೂಜೆ ನಡೆಯಿತು.

ಮಾರನೆಯ ಸೋಮವಾರ ಅದೂ ಮಾಯವಾಯ್ತು. ಧರ್ಮಸಾಗರರು ಬೇರೊಂದು ಚಿತ್ರಕ್ಕೆ ಆರ್ಡರ್ ಕೊಟ್ಟರು. ಅದೂ ಒಂದೇ ವಾರದಲ್ಲೇ ಸರಬರಾಜಾಯಿತು.

ಆ ಮೂರು ಚಿತ್ರಗಳನ್ನು ನಾನು ನೋಡಿದ್ದೆ. ಒಂದರ ತದ್ವತ್ ಕಲಾ ಕೌಶಲವೇ ಇನ್ನೊಂದರಲ್ಲಿ. ಒಬ್ಬನೇ ಚಿತ್ರಗಾರ ಬರೆದರೂ ಇಷ್ಟರ ಮಟ್ಟಿಗೆ ಎರಕ

ದಲ್ಲಿ ಹೊಯ್ದಂತೆ ಒಂದೇ ಚಿತ್ರ ಬರೆಯುವುದು, ಅಸಂಭವ ಎನಿಸಿತು. ಚೌಕಟ್ಟಿನಲ್ಲಿ ವ್ಯತ್ಯಾಸವೇನೋ ಇತ್ತು ಅನ್ನಿ.

ಆದರೂ ನನಗೆ ಅನುಮಾನ ಬಂತು.

ಧರ್ಮಸಾಗರರಿಗೆ ನನ್ನ ಅನುಮಾನ ಹೇಳಲೇ ಇಲ್ಲ. ನಾನು ಅವರ ಅಂಗಡಿ ಕಾರಖೂನ ಅಷ್ಟೆ. ಪಾರುಪತ್ಯ ನನಗೇಕೆ?

ಆದರೂ ಕಾವಲುಗಾರನ ಮೇಲೆ ನನ್ನ ಕಣ್ಣು ಮೊದಲಿಂದಲೂ. ರಾತ್ರಿ ಎಂಟಕ್ಕೆ ಉಂಡು ಬಂದು ನಾವೆಲ್ಲಾ ಹೋದಮೇಲೆ ಒಂಭತ್ತು ಗಂಟೆಗೆ ಬೆಚ್ಚಗೆ ವರಾಂಡಾದಲ್ಲಿ ಮಲಗುವುದಕ್ಕೆ ಅವನಿಗೆ ನಲ್ವತ್ತು ರೂಪಾಯಿ ಸಂಬಳ. ಹಗಲೆಲ್ಲಾ ಸುಳ್ಳು ಲೆಕ್ಕ ಬರೆದೂ ಬರೆದೂ ದುಡಿದ ನನಗೆ ನಲ್ವತ್ತೆ ರೂಪಾಯಿ ಸಂಬಳ. ಸ್ವಾಮಿ ಎಂದು ನಾನು ಧರ್ಮಸಾಗರರ ಎದುರಿಗೆ ತಲೆ ಕೆರೆದುಕೊಳ್ಳುತ್ತಾ ನಿಂತರೆ ಅವರು ನೀನು ಮಾಡಿರುವ ಲೋಯರ್‌ಸೆಕೆಂಡರಿ ಪರೀಕ್ಷೆಗೆ ಇನ್ನೆಷ್ಟೋ ಸಂಬಳ ಎನ್ನುತ್ತಾರೆ. ಆದರೆ ಲೋಯರ್‌ಸೆಕೆಂಡರಿಯ ನಾನು ಬರೆದ ಸುಳ್ಳು ಲೆಕ್ಕವನ್ನೆಲ್ಲಾ, ಐ ಎ ಎಸ್ ಮಾಡಿದ ವರಮಾನ ತೆರಿಗೆಯವ ಒಪ್ಪಿಕೊಳ್ಳುತ್ತಾನಲ್ಲಾ, ಅದನ್ನು ಮಾತ್ರ ಯಾರೂ ಹೇಳಲೊಲ್ಲರು. ನಾನೂ ಹೇಳಿಕೊಳ್ಳುವಹಾಗಿಲ್ಲ ಹಾಗಾಗಿ ನನ್ನ ಮನಸ್ಸು ಕಲಕಿಯೇ ಹೋಗಿತ್ತು. ಧರ್ಮಸಾಗರರ ಮೇಲೆ ನಾನು ಏನು ತಾನೆ ಮಾಡಬಲ್ಲೆ ? ಅವರ ಹೊಟ್ಟೆ ಮೇಲೆ ಹೊಡೆಯುವಂತೆ ಮಾಡಬಹುದು; ಆದರೆ, ಆ ಏಟು ನನ್ನ ಹೊಟ್ಟೆ ಮೇಲೆ ಒದ್ದೆ ಬಟ್ಟೆ ಹಾಕಿಯೇ ಹಾಕಿಸುತ್ತೆ. ಅಂದ ಮೇಲೆ ನನ್ನ ವಿಷವೆಲ್ಲಾ ಆ ಕಾವಲುಗಾರನ ಮೇಲೆ ತಿರುಗಿತು.

ಅವನ ಮನೆ ಎಲ್ಲಿ ಎಂದು ಕಂಡುಹಿಡಿದೆ.

ಮುಂದಿನ ಸೋಮವಾರ ಯಥಾಪ್ರಕಾರ ಚಿತ್ರ ಮಾಯವಾಗಿತ್ತು. ಸೋಮವಾರ ಸಂಜೆ ಅಂಗಡಿ ಮುಚ್ಚಿದ ಮೇಲೆ, ಮನೆಗೆ ಹೋಗುವ ಮೊದಲು ಕಾವಲುಗಾರನ ಮನೆಗೆ ಹೋದೆ, ಕಾವಲುಗಾರನ ಹೆಂಡತಿ ಕೇಳಿದಳು "ಏನ್ರಪ್ಪಾ! ಈಗೇಕೆ ಬಂದಿರಿ ಅಂತ. ನೆನ್ನೆ ರಾತ್ರಿ ಒಂದು ಚಿತ್ರ ಕಳಿಸಿದ್ದನಲ್ಲಾ ಅದನ್ನ ತೆಗೆದುಕೊಂಡು ಹೋಗಿ ಮಾರಿಬಿಡಿ ಅಂತ ಕಾವಲುಗಾರ ಹೇಳಿಕಳಿಸಿದ. ಆ ಕಟ್ಟುಕೊಡವ್ವಾ" ಎಂದೆ. ರೆಪ್ಪೆ ಕೂಡ ಹಾರಿಸಲಿಲ್ಲ. ಆಕೆ ನೆಟ್ಟಗೆ ಒಳಗೆ ಹೋಗಿ ಒಂದು ಕಾಗದ ಕಟ್ಟಿದ ಚೌಕಟ್ಟು ತಂದು ನನ್ನ ಕೈಗೆ ಕೊಟ್ಟಳು. ಅದನ್ನು ಮನೆಗೆ ತೆಗೆದುಕೊಂಡು ಹೋಗಿ ದೇವರ ಮನೆಯಲ್ಲಿಟ್ಟು ಉಂಡು ಮಲಗಿದೆ.

ಮಾರನೆಯ ಮಧ್ಯಾಹ್ನ ಮೂರು ಗಂಟೆಗೇ ಕಾವಲುಗಾರ ನಮ್ಮ ಅಂಗಡಿ ಹತ್ತಿರದ ಹೋಟಲ ಹತ್ತಿರ ನಿಂತಿದ್ದ ನಾನು ಕಾಫಿ ಕುಡಿಯಲು ಹೋದಾಗ.

ಏನಪ್ಪಾ! ರಾತ್ರಿಯೆಲ್ಲಾ ಕಾವಲು ಕಾಯ್ತು....ನಿದ್ರೆ ಇಲ್ಲ. ಹಗಲಾದರೂ ನಿದ್ರೆ ಮಾಡಬಾರದೇ ಈಗೇಕೆ ಇಲ್ಲಿಗೆ ಬಂದೆ ಎಂದೆ. "ಚಿತ್ರಾನ ಎಷ್ಟಕ್ಕೆ ಮಾರಿದಿರಿ" ಎಂದ ಅವ ನೇರನಾಗಿ. "ಮಾರಲಿಲ್ಲಪ್ಪಾ" ಎಂದೆ ದೈನ್ಯದಿಂದ. "ಸೋಮಿ, ಅದು ಮಾರಿದರೆ ನಲ್ವತ್ತು ರೂಪಾಯಿ ಸಿಗುತ್ತೆ....ಕೊಂಡ ಶೆಟ್ಟಿ ಸಾಹುಕಾರರಿಗೆ ಬೇರೆ ಕಟ್ಟಿಹಾಕಿ ನೂರಕ್ಕೆ ಮಾರುತ್ತಾನೆ....ಅಂದರೆ, ಇಲ್ಲಿನತನಕ ನೂರಾ ಇಪ್ಪತ್ತು ಸಿಕ್ಕಿದೆ—ನೀವು ಅರವತ್ತು ತೊಗೊಳ್ಳಿ. ಇನ್ನು ಮೇಲೆ ನೀವೂ ನಾನೂ ಇದರಲ್ಲಿ ಪಾಲುದಾರರು. ನಡೆದಷ್ಟು ದಿನ ನಡೆಯಲಿ ಎಂದ. ಅರವತ್ತು ರೂಪಾಯಿ ನನ್ನ ಕೈಗಿಟ್ಟ. ಆಗಬಹುದು ಎಂದು ಒಪ್ಪಿ ಅವನಿಗೆ ಬಾದಾಮಿ ಹಲ್ವಾ ಕೊಡಿಸಿದೆ. ಆ ಹಣದಲ್ಲೇ!

ರಾಷ್ಟ್ರಪಿತನ ಹೆಸರಿನಲ್ಲೇ ನಾವಿಬ್ಬರೂ ಈಗ ತಾತ್ಕಾಲಿಕವಾಗಿ ಸುಖ ಜೀವನ ಮಾಡುತ್ತಿದ್ದೇವೆ....ಭವಿಷ್ಯದ ಭಯವೇ ಇಲ್ಲ. ನೆಹ್ರೂ ಚಿತ್ರ ಹಾಕಿಸಲೇಬೇಕು ಬಹಿರಂಗವಾಗಿ ಎಂದು ಆಗಲೇ ಧರ್ಮಸಾಗರರಿಗೆ ಸಲಹೆ ಕೊಟ್ಟಿದ್ದೇನೆ... ....

—"ಕುಮಾರ್"

ಅಲ್ಲವೇ ?

ಕಲೋಪಾಸಕಿಯು ತನ್ನ ಕಲೋಪಾಸನೆಯಲ್ಲಿ ಅತ್ಯಂತ ಶ್ರಮವಹಿಸುವುದು ಮಾತ್ರವೇ ಅಲ್ಲ, ಅತ್ಯಂತ ಶ್ರಮವನ್ನು ಎಲ್ಲರಿಗೂ ಕೊಡುವಂತಹ ಪ್ರಚಂಡ. ಅಲ್ಲವೇ?

* * *

ಮೇಲಧಿಕಾರಿಗೆ ಬೆಣ್ಣೆ ಹಚ್ಚಬೇಕಾದರೆ, ಅವನ ಹುಕುಂಅನ್ನು ಜಾರಿಗೆ ತರಲೇಬೇಕಾಗಿಲ್ಲ. ಅವನ ಹುಕುಂಅನ್ನು ವಿವರವಾಗಿ ಕೇಳಿದರೆ ಸಾಕು. ಅಲ್ಲವೇ?

* * *

"ನೀನಾಮ ರೂಪಮುನಕು" ಹಾಡೋತನಕ, ಸಂಗೀತಗಾರ ಮುಕ್ತಿಯನ್ನು ಪಡೆದವನೋ ಇಲ್ಲವೋ ಹೇಳುವುದು ಕಷ್ಟ. ಅಲ್ಲವೇ?

* * *

ಇದು ಕೇಳಿದಾಗ ಎಷ್ಟು ದುಃಖವಾಯ್ತು ಅಂತ.

—"ಮೂರ್ತಿಂಗಳು ಇತ್ತಿಲ್ಲವೇ! ಗೊತ್ತೇ ಆಗಲಿಲ್ಲ" ಅಂತ ಸ್ನೇಹಿತ ರಂದಾಗ. ಅಲ್ಲವೇ?

* * *

ಸಾಮಾನ್ಯವಾಗಿ ನಮ್ಮೂರಿನಲ್ಲಿ ಕರೀ ಮಣಿ ಸರವನ್ನು ಕರೀ ಮಣೀಗೆ ಕಟ್ಟೋದು. ಅಲ್ಲವೇ?
